

ಸಂಪುಟ ೬ | ಡಿಸೆಂಬರ್ ೧೯೪೬ | ಸಂಚಿಕೆ ೯

ಕುಹಕಿಡಿಗಳು

ಈ ಸಾರಿ ಮೊಹರಂ ಹಬ್ಬವನ್ನು ಹೈದ್ರಾಬಾದಿನಲ್ಲಿ ಹಿಂದೂಗಳು ಆಚರಿಸಿದರಂತೆ.

* * * *

ಲಾಲಾ ಅಮರನಾಥನನ್ನು, ಆಸ್ಟ್ರೇಲಿಯಾದಲ್ಲಿ ಭಾರತದ ಪ್ರತಿನಿಧಿಯಾಗಿ ನೇಮಿಸಿದರೆ ಬಲುಚೆನ್ನ, ಎಂದು ಆಸ್ಟ್ರೇಲಿಯನ್ನರು ಹೇಳುತ್ತಿದ್ದಾರಂತೆ.

* * * *

ಚಕ್ರವರ್ತಿ ರಾಜಾಜೀಯವರು, ಚಕ್ರವರ್ತಿ ಪುತ್ರಿಯ ಮದುವೆಯ ಸಲುವಾಗಿ ಸಂತೋಷ ಕೂಟವನ್ನೇರ್ಪಡಿಸಿದ್ದರಂತೆ—

* * * *

ಸರ್ಕಾರದ ಕೆಲಸವು ಬಲು ನಿಧಾನ—ಹೇಳಿಕೆ—

—ಅಕ್ಟೋಬರ್ ಹನ್ನೆರಡರಾಚೆ ಹತ್ತು ಹನ್ನೆರಡು ದಿನಗಳಲ್ಲಿ ಅದೆಷ್ಟು ಚಟುವಟಿಕೆ – ತರಾತುರಿ – ಹಾಗಾದರೂ, ಈ ಅಪಖ್ಯಾತಿಯೇ ?

* * * *

ಶೈಲಿನಲ್ಲಿ ಟಿಕೆಟ್ ದರಗಳನ್ನು ಹೆಚ್ಚಿಸಿದ್ದಾರಂತೆ—

—ಹಾಗೇ ಹನ್ನೆರಡು ವಯಸ್ಸಿನ ತನಕ ಅರ್ಧ ಛಾರ್ಜು ಇರುವುದನ್ನು ಹದಿನೆಂಟಕ್ಕೆ ಏರಿಸಬಾರದೇ ?

*   *   *   *

ಇರು, ಇರು, ಹುಟ್ಟಿದ ಹಬ್ಬ ಮಾಡ್ತೀವಿ ಅಂದರೆ—

—ಬೇಡ ! ಬೇಡ ! ಅಂತ ಬೆಟ್ಟಕ್ಕೆ ಹೋದನಂತೆ.

*   *   *

ಹೈದ್ರಾಬಾದ್ ಬಹು ಸಂಖ್ಯಾತ ಮುಸ್ಲಿಮೇತರರ ರಕ್ಷಣೆಯನ್ನು ಅಲ್ಪ ಸಂಖ್ಯಾತ ಮುಸ್ಲಿಮರು ಮಾಡಬೇಕೆಂದು ಮಜ್ಲೀಸ್ ಅಧ್ಯಕ್ಷರು ಸೂಚನೆ ಕೊಟ್ಟಿದ್ದಾರೆ—

—ಒಂದು ತೋಳ ಹತ್ತು ಕುರಿ ಕಾದಹಾಗೆ.

*   *   *

ಗಾಂಧಿ ಟೋಪಿ ಹಾಕಿದರೆ ಏನೋ ಒಂದು ತರಹ ಚಟುವಟಿಕೆ ಹುಟ್ಟುತ್ತೆ ' ಹಿರಿಯ ಅಧಿಕಾರಿಗಳು '—

—ಹೌದು ! ಮುಪ್ಪಿನ ಮುದುಕರೂ ಕೂಡ ಬೆಚ್ಚಿಬಿದ್ದು ನಿಲ್ಲುತ್ತಾರೆ.

*   *   *

ಈ ಕಾಂಗ್ರೆಸ್ ಸತ್ಯಾಗ್ರಹ ಯಶಸ್ವಿಯಾದಮೇಲೆ ಏಕೋ ಪೌರಸಭಾ ಚುನಾವಣೇಲಿ ಚುರುಕೇ ಇಲ್ಲ.

*   *   *

ನಾಡನೊಡೆದವಗೆ

ಇದರೊಳ್ ಕಲ್ಕತ್ತ ಯಜ್ಞ ಪ್ರವರ ದಶದಿಶಾಮಂಡಲಂ ರಕ್ತಪಾತಂ
ಮುದದೊಳ್ ಮೂಡಿತ್ತಡಂಗಿತ್ತಿದರೊಳೆ ಜುನಗಾಡಾನ್ವಯಂ, ತ್ವತ್ಪ್ರತಾಪ
ಕ್ಕಿದರಿಂದಂ ಕಾಶ್ಮಿರೋಟಂ, ಅಕಟ, ನಿಜಾಮಾರಣಕ್ಕಾದಿಯಾಯ್ತು
ವ್ಮ್ಮದ ಬೆಂಕೀ, ಪೇಳ,ಸಾಮಾನ್ಯಮೆ, ಬಗೆಯೆ, ಭವದ್ವೈತರಾಷ್ಟ್ರಪ್ರಚಾರಂ

ಉರಿಗಾಳು

" ಹಿಂದುಸ್ತಾನ್ ಹಮಾರಾ " ಎಂಬ ಇಕ್ಬಲ್ ಹಾಡನ್ನು ಪಾಕಿಸ್ತಾನದ ಎಲ್ಲ ಯುವಕರೂ ಶಾಲಾ ಕಾಲೇಜುಗಳಲ್ಲಿ ದಿನವೂ ಹಾಡುವಂತೆ ಏರ್ಪಾಟು ಮಾಡಲಾಗಿದೆಯಂತೆ.

* * * *

ಸರ್ಕಾರದವರು ಕುಸುಬಲಕ್ಕಿಯನ್ನು ರೇಷನ್ ಕೊಡುತ್ತಿರುವುದು ಮೆಚ್ಚ ತಕ್ಕ ಪದ್ಧತಿ (ವೈದ್ಯಸಂಘ)... ....ಯಾವ ದೃಷ್ಟಿಯಿಂದ ?

* * * *

" ನಮಗೆ ಬಡವರೂ ಒಂದೆ ! ಶ್ರೀಮಂತರೂ ಒಂದೆ ! ಹಿಂದುಗಳೂ ಒಂದೆ ! ಮುಸಲ್ಮಾನರೂ ಒಂದೆ ! " (ಭಾಷಣ) . ಹಾಗಾದರೆ, ಶ್ರೀಮಂತ ಮುಸಲ್ಮಾನ್ ವಿದ್ಯಾರ್ಥಿಗಳಿಗೆ ಕೊಡುತ್ತಿರುವ ಅರ್ಧ ಫೀ ರಿಯಾಯತಿಯನ್ನು ಬಡ ಹಿಂದುಗಳಿ ಗೇಕೆ ಕೊಡಬಾರದು ?

* * * *

"ಮುಜರಾಯಿ ಮಂತ್ರಿಗಳನ್ನಲ್ಲದೆ, ಮಿಕ್ಕ ಹಿಂದೂ ಮಂತ್ರಿಗಳನ್ನೂ ನಮ್ಮ ನಮ್ಮ ಗುಡಿಗಳಲ್ಲಿ ಭೇಟಿಮಾಡಲು ನಾವು ಕಾತುರರಾಗಿದೇವೆ " ಎಂದು ಮೈಸೂರಿನ ಅಖಿಲದೇವತಾ ಸಮ್ಮೇಳನದಲ್ಲಿ ಠರಾವಾಗಿದೆಯಂತೆ. ದೇವರ ಮೊರೆಯನ್ನು ಕೇಳುವವರು ಯಾರು ?

* * *

ನಿಜಾಂ ಪ್ರಾಂತಕ್ಕೆ ಗುಪ್ತವಾಗಿ ರವಾನೆಯಾಗುತ್ತಿರುವ ಶಸ್ತ್ರಾಸ್ತ್ರಗಳನ್ನು ವಶಪಡಿಸುವುದರಿಂದಲೇ ಇಂಡಿಯಾ ಡೊಮಿನಿಯನ್ನಿನ ಶಸ್ತ್ರಶೇಖರಣೆ ಸಮಸ್ಯೆ ಪರಿಹಾರವಾಗಬಹುದೆಂಬ ನಿರೀಕ್ಷಣೆ ಇದೆ (ಪತ್ರಿಕೆ)

* * * *

ಕಿವಿಗೂ ಕೇಳಿಸದ ಶಬ್ದಗಳನ್ನು ರಿಕಾರ್ಡುಮಾಡಬಲ್ಲ ಹೊಸ ಕ್ರಾಂತಿಕಾರಕ ಯಂತ್ರವನ್ನು ಲಂಡನ್ನಲ್ಲಿ ಕಂಡುಹಿಡಿದಿದಾರೆ (ಸುದ್ದಿ). ಇಂಥ ರಿಕಾರ್ಡುಗಳು ನಮ್ಮಲ್ಲೇ ಹತ್ತಾರು ಇವೆಯಲ್ಲಾ !

* * * *

" ಉಗುರಿನಲ್ಲಿ ಹೋಗುವುದಕ್ಕೆ ಕೊಡಲಿ ಯಾತಕ್ಕೆ ? " (ಎ ಎಂ. ಸಿ. ಸಿ ಭಾಷಣ)... ಬೆರಳು ತೋರಿಸಿದರೆ, ಹಸ್ತ ನುಂಗುವವರನ್ನು ಓಡಿಸಲು ಉಗುರು .. ಹೇಗೆ ?

* * * *

" ಮೈಸೂರು ದೇಶದ ಚರಿತ್ರೆಯಲ್ಲಿ ಇಂದು ಒಂದು ಹೊಸ ಅಧ್ಯಾಯ ಪ್ರಾರಂಭವಾಗಿದೆ "(ಮುಖ್ಯ ಮಂತ್ರಿ ಭಾಷಣ). ಇದರಿಂದ, ಶಾಲಾ ವಿದ್ಯಾರ್ಥಿಗಳಿಗೆ ಅಷ್ಟು ಸಂತೋಷವಾಗಲಾರದು.

* * * *

ಪಾಕಿಸ್ತಾನದಲ್ಲಿರುವ ಹರಿಜನರೇ ಮುಂತಾದ 'ಪಟ್ಟಿ' ಜಾತಿಯವರೆಲ್ಲ ಎಡಗೈಗೆ ಹಸುರು ಬಟ್ಟೆಯನ್ನು ಕಟ್ಟಿಕೊಂಡು ತಿರುಗಾಡಬೇಕಂತೆ ... ಅಲ್ಲಿ, ಉಳಿದವರೆಲ್ಲ ಬಲಗೈಯವರೇನು ?

* * * *

" ಹೊಳೆಯಲ್ಲಿ ಬಿದ್ದು ಒದ್ದಾಡುತ್ತಿದ್ದ ಪೋಲೀಸಿನವನೊಬ್ಬನನ್ನು ನಮ್ಮೂರು ಪಟೇಲರ ಮಗ ರಕ್ಷಿಸಿದ" (ಸುದ್ದಿ) . ಹೊಸ ಯುಗ ಪ್ರಾರಂಭವಾಗಿದೆ ಎಂಬುದಕ್ಕೆ ಇದೊಂದೇ ನಿದರ್ಶನ ಸಾಕು.

* * * *

" ಇದುವರೆಗೂ ನಾವು ನಮ್ಮ ಕಷ್ಟನಷ್ಟಗಳಿಗೆಲ್ಲ ಆರ್ಕಾಟರನ್ನೇ ದೂರುತ್ತಿದ್ದೆವು " (ಭಾಷಣ) ...ಇನ್ನು ಮುಂದೆ, ಯಾರನ್ನೂ ದೂರುವ ಹಾಗಿಲ್ಲ.

* * * *

" ಜವಾಹರಲಾಲರು ಒಮ್ಮೆ ಒಬ್ಬ ಪತ್ರಿಕಾ ಪ್ರತಿನಿಧಿಯನ್ನು ಹೊಡೆದೇ ಬಿಟ್ಟರು ! " (ಭಾಷಣ)....ಇದೇ ಕೀರ್ತಿಯನ್ನು ಪಡೆಯಲು ಇತರ ಪ್ರತಿನಿಧಿಗಳನ್ನೂ ಹೀಗೆ ಹುರುಪುಗೊಳಿಸುವುದು ಚೆನ್ನಿಲ್ಲ.

* * * *


" ಇವತ್ತಿನ ಹುಡುಗಿಯರು ಹತ್ತು ವರ್ಷ ಹಿಂದಿನ ಹುಡುಗಿಯರಲ್ಲ " (ಭಾಷಣ) ..ಹೇಗೆ ಆದಾರು ?....ವಯೋಗುಣ.

* * * *

ನಿರಾಶ್ರಿತರ ಕಷ್ಟಪರಿಹಾರಕ್ಕಾಗಿ ಹಣಕೂಡಿಸಲು ನಾಟಕಗಳನ್ನಾಡುವ ಸಂಘಗಳ ಕಷ್ಟಪರಿಹಾರಕ್ಕಾಗಿ ಹಣ ಕೂಡಿಸಲು ಇಷ್ಟರಲ್ಲೇ ಕೆಲವು ಕಲಾವಿದರು ವಿವಿಧ ವಿನೋದಾವಳಿಯನ್ನು ನಡೆಸುವರಂತೆ....... ಅಂತೂ, ನಮಗೆ ಕಷ್ಟ ತಪ್ಪಿದ್ದಲ್ಲ.

* * * *

—— o ——



ಮಹಾತ್ಮರ ಹೆಜ್ಜೆಯನ್ನನುಸರಿಸಿ ...

ರಾಜೀವಪುರದ 'ರೇಡಿಯೋ' ಸತ್ಯಾಗ್ರಹ

ರಾಜೀವಪುರದಲ್ಲಿ ಸತ್ಯಾಗ್ರಹದ ಗಲಾಟೆಯೋ ಗಲಾಟೆ—" ಅಲ್ಲಿನ ಸರ್ಕಾರಿ ಬಾನುಲಿಯಲ್ಲಿ ಸಾರ್ವಜನಿಕ ಪ್ರಮುಖರಿಗೆ ಭಾಷಣಮಾಡಲು ಅವಕಾಶ ಕೊಡುವುದಿಲ್ಲ— ಬರೀ ಅಧಿಕಾರಿ ವರ್ಗದವರು, ಹೊಗಳು ಭಟ್ಟರು, ಇವರಿಗೇ ಮೀಸಲಾಗಿರಿಸಿದೆ – ಇದು ಕೂಡದು ಪ್ರಜಾ ಪ್ರಮುಖರು ಪ್ರಜೆಗಳನ್ನುದ್ದೇಶಿಸಿ ಭಾಷಣ ಮಾಡಲು ದಿನಕ್ಕೆ ಗಂಟೆಯೊಂದರಂತೆ ಅವಕಾಶ ಕಲ್ಪಿಸಲೇ ಬೇಕು " ಎಂದು ಜನಸಮೂಹವೇ ಸತ್ಯಾಗ್ರಹಕ್ಕೆ ಶುರುಮಾಡಿತ್ತು. ಊರಿಗೆ ಊರೇ ಮೇಲೆ ಬಿದ್ದರೆ ಶಾನುಭೋಗ ಏನುತಾನೇ ಮಾಡಾನು ? ದೊರೆ ತನಕ ದೂರುಹೋಯಿತು – ಬಿಡುಗೈದೊರೆ 'ಆಗಬಹುದು' ಬಾನುಲಿಯ ಅಧ್ಯಕ್ಷನಿಗೆ ಹುಕುಂ ಕೊಡುತ್ತೇನೆ ಅವನನ್ನು ಸಂಧಿಸಿ ಸರಿಮಾಡಿಕೊಳ್ಳಿ ಎಂದರು.

ಅಧ್ಯಕ್ಷ ಇನ್ನೇನು ಮಾಡಿಯಾನು ? ಎಂದು ಎಲ್ಲರೂ ಅಂದುಕೊಂಡರು. ಆತನೂ 'ಆಗಬಹುದು. ನಿಮಗೆ ಹೇಗೆಬೇಕೋ ಹಾಗೆ ದಿನಕ್ಕೆ ಮೂರು ಗಂಟೆ ಪ್ರಸಾರಕ್ರಮ ಏರ್ಪಡಿಸಿಕೊಳ್ಳಿ' ಎಂದ.


ಊರಿಗೆ ಊರೇ ಹಿಗ್ಗಿಹೋಯ್ತು. ಅಷ್ಟುದಿವಸ ಅಧ್ಯಕ್ಷನನ್ನು ಅನ್ನುತ್ತಿದ್ದವರೂ ಕೂಡ, ಈಗ ಪರವಾಗಿಲ್ಲಪ್ಪಾ, ಇವ ಕಾಲೋಚಿತವಾಗಿ ನಡೆದುಕೊಳ್ಳುತ್ತಾನೆ ಎಂದುಕೊಂಡರು.

ಸಾಯಂಕಾಲ ೬ ರಿಂದ ೯ ವರೆಗೆ ಪ್ರಜಾಪ್ರಸಾರಕ್ರಮ, ನೆಹ್ರೂ ಷರ್ಟಿನವರು, ಗಾಂಧಿ ಲುಂಗಿಯವರು, ಆಸಾದ್ ಟೋಪಿಯವರೂ, ಮುಖ್ಯ ಪ್ರಜಾ ಪ್ರಮುಖರೆಲ್ಲರೂ ಭಾಷಣಗಳನ್ನು ಬೆವರು ಸುರಿಸಿಕೊಂಡು ಮಾಡಿದ್ದೂ ಮಾಡಿದ್ದೇ —ಪ್ರಜೆಗಳನ್ನೆಲ್ಲಾ ಒಟ್ಟಿಗೇ ಈರೀತಿ ಮಾತನಾಡಿಸಬೇಕಾದರೆ ಸ್ವಲ್ಪ ಪ್ರಯಾಸವೇ ಅಲ್ಲವೇ !

೯ ಗಂಟೆಗೆ ಒಬ್ಬರಿಗೊಬ್ಬರು ಶಹಭಾಶ್‌ಗಿರಿ ಕೊಟ್ಟುಕೊಂಡು ಹೊರಕ್ಕೆ ಬಂದರು.

ಊರಿನವರಲ್ಲಿ ಯಾವ ಉತ್ಸಾಹವೂ ಇರಲಿಲ್ಲ. ಪ್ರಮುಖರೆಲ್ಲರೂ ‘ನಾವ್ಮಾಡಿದ್ದು ಜನರಿಗೆ ಏಕೆ ಕೇಳಿಸಲಿಲ್ಲ’ ಎಂದು ವಿಚಾರಿಸಿದಾಗ ತಿಳಿಯಬಂತಂತೆ— ಅಧ್ಯಕ್ಷರು ‘ಸಂಕಟ ಬಂದರೆ ವೆಂಕಟರಮಣ’ ಎಂದು, ಇವರುಗಳಿಗೆ ಭಾಷಣಕ್ಕೆ ಅನುಮತಿ ಕೊಟ್ಟಾಗಲೇ, ಬಾನುಲಿಯ ಮುಖ್ಯ ಸ್ವಿಚ್ಚನ್ನು ತಪ್ಪಿಸಿ, ದೇವರ ಸೇವೆಗೆ ಹೋಗಿಬಿಟ್ಟಿದ್ದರೆಂದು. Lionel Fielden ನಂತೆ.

———



ಸಾಹುಕಾರ—


ರಾಷ್ಟ್ರಧ್ವಜಾರೋಹಣ ಸಂತೋಷವಾಗಿ ಮಾಡ್ತೀನಿ—

—ಆದರೆ ಈ ಇಳಿ ವಯಸ್ಸಿನಲ್ಲಿ ಆ ಕಂಬ ಹತ್ತುವುದಕ್ಕಾಗುತ್ತದೆಯೋ ಅನ್ನೋದೇ **ಸಂಶಯ.**



ಹೇ ! ಅಪರಂಜಿ !

ಊರೊಳಗಿದ್ದರೆ, ಹೋಗೆಂಬರು ;
ಊರ ಹೊರಗಿದ್ದರೆ ಲೇಸೆಂಬರು.
ಬಾಯ ಬಿಗಿದರೆ ಮೂಗನೆಂಬರು ;
ಬಾಯ ತೆರೆದರೆ, ಬಡಾಯಿ ಎಂಬರು.
ಕೊಟ್ಟರೆ ಕೀಳೆಂಬರು ;
ಬಿಟ್ಟರೆ ಮೇಲೆಂಬರು.
ಕಾಸನುಳಿಸಿದರೆ ಹುಂಬನೆಂಬರು ;
ಕಾಸಗಳಿಸಿದರೆ ತಿಂಬನೆಂಬರು.
ದಿಟವನಾಡಲು ಬಾರದೆಂಬರು,
ದಿಟವ ಮುಚ್ಚಲು ರೊಚ್ಚಿಗೇಳ್ವರು.
ಜಾಡಿ ಬೇಡೆಂಬರು ;
ಮೋಡಿ ಸಾಕೆಂಬರು.
ಹೇಡಿ ಕೂಡೆಂಬರು ; ದೂಡಿ ನಡಿ ಎಂಬರು ;
ಸಾಡೆ ಓಡೆಂಬರು.
ತಾಳಿದರೆ ನೀಳೆಯುವ ಕೊಡುವರು ;
ನಾನೆಂತು ಬದುಕುವೆನಮ್ಮ ;
ಕೇಡಿಗನ ಕೋಡಗನ ಪಾಡಾದುದೆ,
ಕೊರಪಂಜ ಕಾಯುವಪರಂಜಿ ದೇವೀ !



ಇವರುಗಳೆಲ್ಲರೂ ಕೂಡ—
ಮಹಾತ್ಮಾ ಗಾಂಧೀಕೀ ಜೈ.

ಅಮರನಾಥನ ದಳ

ನೆಗೆದೋಡಿ, ನೆಗೆದೋಡಿ,
ನೆಗೆದೋಡಿ, ಚಿಮ್ಮಿ,
ವಿಕ್ಕೆಟ್ಟ ಸಾಲ್‌ಮೇಲೆ
ಬೌಲಿದರು, ಚೆಂಡ !

" ಸ್ಪಿನ್ನ ಸೇರಿಸಿ ! ಕೊಡಿರಿ,
ಅಚ್ಚ ಗೂಗಲಿ ! '' ಎಂದ—
ಹೊಡೆದ ಚೆಂಡನು ಅಟ್ಟಿ
ಹಿಡಿಯುವುದಕವರಲ್ಲ !
ತಡೆಯುವುದಕವರಲ್ಲ !
ತ್ರೋಗೆಳೇ ಸರಿಯಿಲ್ಲ !
ಬೈಗಳದೆ ಸುರಿಮಳೆ !

ಆಸ್ಟ್ರೇಲಿ ಜಟ್ಟಿಗರು
ಬೀರಿದರು ಗಡಿಗೆ !
ರನ್ನುಗಳು, ಚಣ ಚಣಕು,
ಏಳುತಿರೆ ಭರದಿ,
ಅಮರನಾಥನು, ಪಾಪ,
ಕುಗ್ಗಿದನೆ ? ತಗ್ಗಿದನೆ ?
ಕ್ಯಾಚ ಬಿಟ್ಟಿಹರೆಂದು
ತೀರ ಮನಮುರಿದು ?

ಆರ್ನೂರ ಹತ್ತಿರಕೆ
ಬಂದರವರೆಂದು ?

ಆಟ ಸಾಕೆಂದವರು
ತೇಗಿ ತೊಡೆ ತಟ್ಟಿ—
ಇಂಡ್ಯದಾ ಕ್ರಿಕ್ಕೆತರು
ಯಾರೊ ಮೊದಲಿಳಿದು
ನೆಗೆದು ಕೈಮೇಗೆತ್ತಿ
ಜಗದ ವೀರರ ಕೆತ್ತಿ
ಕೊತ್ತಿದರು ತೋಳೆತ್ತಿ
ಖಂಡ ಬೆರಗಾಗೆ !

ಡಕ್ಕು ಬಂದರು ಸರಿಯೆ
ಲಕ್ಕು ಬಡಿದರು ಸರಿಯೆ
ಗಲ್ಲಿ ಕಂಡರು ಸರಿಯೆ
' ಸಿಲ್ಲಿ ' ಹಿಡಿದರು ಸರಿಯೆ
ತಾಗಿ ಬಿಗಿದರು ನುಗ್ಗಿ !

ಅಧಿಕಾರಿ ರಂಗ್ನೇಕ
ರಮಿರಿಲಹಿ ರಣವೀರ
ರಾರಾರೊ ಹಿಮ್ಮೆಟ್ಟಿ,

ಸ್ಕೋರ ಬೋರ್ಡನು ನೋಡೆ
ಎದೆ ಬಿರಿಯೆ ಜಗ್ಗೆಂದು

ಕ್ರಿಟ್ಟಿಕ್ಕೆ ! ನೋಡದೋ,
ಮುಂಬರುವರಾಟ !....


ಅವರ ಬಲಗಡೆ ತೋಷ-
ಕವರ ಎಡಗಡೆ ಡಾನ-
ನವರ ಮುಂಗಡೆ ಲಿಂಡ್‌ವ-
ಲವರ ಹಿಂಗಡೆ ಟಾಲ-
ರೆತ್ತಿದರು ಕರವ !

ಸಿಡಿ ಚೆಂಡು ಪುಟವೆದ್ದು
ಬೇಲುಗಳ ಕಡೆಗೆ ಬರೆ
ವಿಧವಿಧದ ಸ್ಟ್ರೋಕಿನಲಿ
ಫೇಲಿಯುರ ಬಸುರಿಂದ
ಸೋಲಿನುರಿ ಬಾಯಿಂದ,
ಕುಪ್ಪಳಿಪ ಕಂಗಾರು
ಹೆಗ್ಗಳಿಕೆ ತಗ್ಗಿಸುತ,
ಮಂಕಡನೊ, ಕಾಪತನೊ,
ಸರವಟ್ಟೆ ಹಾಜರನೊ,

ಕೆರಳಿ ತರುವರು ಕೀರ್ತಿ,
ಮರಳಿ ತುಂಬುತ ಸ್ಫೂರ್ತಿ !

ಸೋತರೂ ಗೆದ್ದಂತೆ
ಗೆದ್ದರೂ ಲಕ್ಕಂತೆ !
ಎಂದು ಹಂಗಿಸಬೇಡ !
ಮಿಾಸೆ ಮಣ್ಣಾದರೂ,
ಮಾಸದವರದು ಹೆಸರು !
ಬೀಸಿ ಏನ್ನುಗ್ಗಿದರು !!
ಲೋಕ ಬೆರಗಾಗೆ !!
ನುಗ್ಗಿಹೊಡೆದುದ ಹೊಗಳು,
ಜಗ್ಗದೆದೆಗಳ ಹೊಗಳು,
ಇಂಡ್ಯದಾ ಕ್ರಿಕ್ಕೆತರ
ಶೌರ್ಯ ಹೊಗಳು !!

—o—



ಹೈದ್ರಾಬಾದಿನ ಸಮದೃಷ್ಟಿ.

ಹಂಚಿಕೆ

[ತಮ್ಮ ಅಧಿಕಾರಾವಧಿಯಲ್ಲಿ, ಅದು ಎಂದು ಮುಗಿಯುತ್ತದೋ ಎಂಬ ಭಯದಿಂದ, ತಮ್ಮ Boysಗೆಲ್ಲ ನೌಕರಿ ಕೊಡುತ್ತಿರುವರು, ಲೇಬರ್ ಪಕ್ಷದವರೂ, ಎಂಬ ದೂರನ್ನು ಚರ್ಚಿಲ್‌ರವರು ತಂದಿದಾರೆ.]

ಏಳಿರೇಳಿರಿ ನಂಟರೆ ! ಕಡೆಯ ಗಳಿಗೆಯ ಹಂಚಿಕೆ !
ಏಳಿ ಸೋದರಳಿಯರೆ ! ನೌಕರೀ ಪ್ರಪಂಚಕೆ !
ತರಿಸಿ ತಮ್ಮನ ಹೈದನ, ಅವನ ಅಣ್ಣನ ಮಾವನ,
ಬೇಗ ಕರೆಯಿಸಿ ವೈದನ, ಅವನ ಅಕ್ಕನ ಭಾವನ !
ನಿಮಗಿದೆಂತಹ ನಾಚಿಕೆ ? ಬಯಸಿದೆಲ್ಲವ ಪಡೆಯಿರಿ
ಬನ್ನಿರೆಲ್ಲರು ಈಚೆಗೆ, ಕನಸುಕಂಡುದ ಬೇಡಿರಿ !
ಏಳಿ ಏಳಿರಿ ಬೇಗನೆ, ಇಂದೆ ಸಿಗುವುದು ಉಂಬಳಿ ;
ನಾಳೆ ಬಹುಶಃ ಮುಗಿಯಿತು, ತಡವ ಮಾಡಲು ಕುಂಬಳ.
ಕೊಡುವ ದಾತನೆ ಕೋ ಎನೆ ಬಿಡುವರಾರೊ ಜಗದಲಿ ?
ದುಡಿವ ಮಂದಿಯು ದುಡಿಯಲಿ, ಸಿಡಿದು ಬಾಯನು ಬಡಿಯಲಿ !
ನಮ್ಮ ಕುಲದಾ ಮಕ್ಕಳು ಇನ್ನು ಯಾರೂ ಇಲ್ಲವೆ ?
ಹತ್ತು ಜನರಾ ಹಣವದು, ನಮಗೆ ಮೀಸಲು ಅಲ್ಲವೆ ?
ಏಳಿರೇಳಿರಿ ನಂಟರೆ ! ಕಡೆಯ ಗಳಿಗೆಯ ಹಂಚಿಕೆ !
ಏಳಿ ಸೋದರಳಿಯರೆ ! ನೌಕರೀ ಪ್ರಪಂಚಕೆ !

—ಗಂಗಾಧರ.

ಅಂದು ನೋಡಿದ ಚಿತ್ರ

" ಬೆಲಾ ಲೂಗೋಸಿ, ಬೋರಿಸ್ ಕಾರ್ಲಾಫ್, ಇಬ್ಬರು ಆಕ್ಟ್ ಮಾಡಿದ್ದಾರೆ ಕಣೋ " ಅಂದ ಎದುತ್ತ ಬಂದ ರಾಮು. " ಮಾಡಿದರೆ ತಾನೇ ಏನು ? " ನಾನು ಕೇಳಿದೆ. " ಏನಂತೆ ಏನು ? ನಿನಗೆ ಟಿಕೀಟ್ ಸಿಕ್ಕಿತೇನೋ ಗುಗ್ಗೂ " ರಾಮು ಉತ್ತರವಿತ್ತ. " ಸರಿ, ನಾನೇನು ಮಾಡಲಯ್ಯ, ಅದಕ್ಕೆ ? " ತಾತ್ಸಾರದಿಂದ ಕೇಳಿದೆ. " ಏನೂ ಇಲ್ಲ, ನಾಳೆ ಬೆಳಿಗ್ಗೆ ಹತ್ತು ಗಂಟೆಗೇ ಸಿದ್ಧವಾಗಿರು, ದುಡ್ಡು ಮರೆತೀಯ ಹುಷಾರು" ರಾಮು ಹೇಳಿದ, ನನ್ನ ಮರೆವನ್ನು ಜ್ಞಾಪಿಸುತ್ತಾ. " ಹತ್ತು ಗಂಟೆಗೆ ! ಏನು, ಮಾರ್ನಿಂಗ್ ಷೋ ಇದೆಯೇ ! " ಆಶ್ಚರ್ಯದಿಂದ ಕೇಳಿದೆ. " ಅಲ್ಲಕಣೋ ಹತ್ತುಗಂಟೆಗೆ ಹೋದರೆ ಮ್ಯಾಟನೀಗೆ ಟಿಕೀಟು ಸಿಕ್ಕೀತು. ಹುಷಾರು, ನಾಳೆ ನಾನು ಬಂದಾಗ ಕಣ್ಕಣ್ಣು ಬಿಡಬೇಡ ಎಂಗೇಜ್‌ಮೆಂಟ್ ಮರೆತ್ಬಿಟ್ಟು. " ಕಾಸು ಖರ್ಚುಮಾಡಲು ಮನಸ್ಸಿಲ್ಲದಿದ್ದರೂ, ಲೂಗೋಸಿ, ಕಾರ್ಲಾಫ್‌ರ ಮೇಲಿನ ಮಮತೆಯಿಂದ " ಹ್ಞೂ " ಎಂದೆ.

ಮಾರನೆಯ ದಿನ ಹನ್ನೆರಡರವರೆಗೆ ಕಾದರೂ ರಾಮುವಿನ ಸುಳಿವೇ ಇಲ್ಲ. ನನಗೂ ಕಾದು ಕಾದು ಸಾಕಾಯಿತು. ಅವನ ಮನೆಗೇ ಹೋಗಿ ಅವನನ್ನು ಕರೆದುಕೊಂಡು ಹೋಗೋಣವೆಂದು ಹೊರಟೆ. ಅವರ ತಾಯಿ ಅವನೆಲ್ಲೆಂದು ಕೇಳಿದಾಗ ಹೇಳಿದರು " ನೋಡು ಮಗು, ಅದೇನೋ ಲೂಗೋಸ್, ಕಾಪಂತೆ, ಅದನ್ನು ನೋಡಲು ಹತ್ತು ಗಂಟೆಗೇ ಹೊರಟುಹೋದ. ಊಟಕೂಡ ಮಾಡಲಿಲ್ಲ ''. " ಹ್ಞೂ, ಬೆಲಾ ಲುಗೋಸಿ, ಬೋರಿಸ್ ಕಾರ್ಲಾಫ್ " ಎಂದು ಗೊಣಗುತ್ತ, ರಾಮುವಿನ ಉತ್ಸುಕತೆಯನ್ನು ಮೆಚ್ಚುತ್ತಾ ಥಿಯೇಟರಿನ ಕಡೆಗೆ ಹೊರಟೆ. ದೊಡ್ಡ ಗಡಿಯಾರದ ಬಳಿ ಬಂದಾಗ ಹನ್ನೆರಡುವರೆ ಬಾರಿಸಿತು.

ಥಿಯೇಟರಿಂದ ಒಂದು ಫರ್ಲಾಂಗು ದೂರದವರೆಗೆ ನಿಂತಿದ್ದ ಕ್ಯೂ ಸಂಚಾರಕ್ಕೆ ಅಡ್ಡಿಯಾಗಿತ್ತು. ಸಿನಿಮಾ ಹತ್ತಿರ ಹೋದಾಗ ಗೊತ್ತಾಯಿತು, ಅದು ಮೂರೂ ಮುಕ್ಕಾಲಾಣೆಯ ಬಾಬೆಂದು. ಏಳಾಣೆ ಮತ್ತು ಹದಿಮೂರಾಣೆಯ ಕಿಟಕಿಗಳಲ್ಲಿ ಕ್ಯೂ ಇರಲಿಲ್ಲ. ಆದರೆ ಗುಂಪು ಸೇರಿತ್ತು ಜನ. ಪ್ರತಿ ಕಿಟಕಿಯಲ್ಲಿ ಐನೂರಕ್ಕೆ ಕಮ್ಮಿ ಜನವಿರಲಾರದೆಂದು ನಿರ್ಧರಿಸಿದೆ. ರಾಮು ಅಲ್ಲೆಲ್ಲೂ ಕಾಣಲಿಲ್ಲ. ನಾನೆಷ್ಟು ಪ್ರಯತ್ನಪಟ್ಟಾಗ್ಯೂ, ಗುಂಪಿನ ನಡುವೆ ತೂರಲಾಗಲಿಲ್ಲ. ಬೇಜಾರಾಗಿ ರೂಪಾಯಿ ಎರಡಾಣೆಯ ಕಿಟಕಿಗೆ ಹೋದೆ. ಅಲ್ಲಿ ಆಗಲೇ—ಅಷ್ಟು ಹೊತ್ತಿಗೆ ಪೋಲಿಸಿನವ ಬಂದಿದ್ದುದರಿಂದ— ಐವತ್ತು ಗಜದಷ್ಟುದ್ದ ಕ್ಯೂ ನೆರೆದಿತ್ತು. ಅಂತೂ ನನಗೆ

ಕ್ಯೂನಲ್ಲಿ ಜಾಗ ಸಿಕ್ಕಿತು. ಬೆವರನ್ನೊರೆಸಿಕೊಳ್ಳುತ್ತ, ರಾಮುವಿಗಾಗಿ ಸುತ್ತಲೂ ಕಣ್ಣು ಹೊರಳಿಸಿದೆ. ರಾಮು ನನ್ನ ಕ್ಯೂನಲ್ಲೇ ಮುಂದೆ ನಿಂತಿದ್ದುದು ಕಂಡು ಬಂತು. ಅವನನ್ನು ಸರಿಯಾಗಿ ಗುರುತು ಹಿಡಿಯುವಷ್ಟರಲ್ಲೇ ಹಿಂದಿನಿಂದ, ಒತ್ತಡ ಜಾಸ್ತಿಯಾಯಿತು. ತಿರುಗಿ ನೋಡಿದೆ ನನ್ನ ಹಿಂದೆ ಆಗಲೇ ಇನ್ನೂರು ಜನಕ್ಕಿಂತಲೂ ಹೆಚ್ಚಾಗಿ ಸೇರಿದ್ದರು. ಗಂಟೆಯಾಗಲೇ ಎರಡಾಗಿತ್ತು . ...

ಎರಡುವರೆಯ ಹೊತ್ತಿಗೆ ಇದ್ದಕ್ಕಿದ್ದಂತೆ ಮುಂದಕ್ಕೆ ಮುಗ್ಗರಿಸಿದಂತಾಯಿತು. ಒಂದು ಚಣಕಾಲ ವಿಚಾರವೇನೆಂದು ಗೊತ್ತಾಗಲಿಲ್ಲ ಮನಸ್ಸಷ್ಟು ಗಾಬರಿಯಾಗಿತ್ತು ಹೇಗೋ ಎಚ್ಚತ್ತು ನೋಡಿದೆ. ಬುಕಿಂಗ್ ವಿಂಡೋ ತೆರೆದಿತ್ತು. ಆಗ ನನಗೆ ಅರ್ಥವಾಯ್ತು ಟಿಕೆಟ್ ಕೊಡಲು ಶುರುವಾಗಿತ್ತೆಂದು. ಮೊದಲನೆಯವನು ಕಿಟಕಿಯನ್ನು ಬಿಟ್ಟಾಗ ಇತರರು ಒಂದು ಜಾಗ ಮುಂದುವರಿದುದರಿಂದ ನಾನು ಆಸರೆ ತಪ್ಪಿ ಮುಗ್ಗುರಿಸಿದ್ದೆ ಅಷ್ಟೆ !

ಕ್ಯೂ ಮುಂದಕ್ಕೆ ಸರಿಯುತ್ತ ಹೋಯಿತು. ನಾನು ಬುಕಿಂಗ್ ವಿಂಡೋ ಬಳಿ ಬಂದಾಗ ಮೊದಲ ಗಂಟೆ ಬಾರಿಸಿತು. ನನ್ನ ಮುಂದಿದ್ದವನಿಗೆ ಟಿಕೇಟು ಕೊಟ್ಟು ಬುಕಿಂಗ್ ಕ್ಲಾರ್ಕ್ ದೊಡ್ಡ ಕಷ್ಟದಿಂದ ಬಿಡುಗಡೆಯಾದವನಂತೆ ನಿಟ್ಟುಸಿರು ಬಿಟ್ಟ.... ...ನನಗೆ ಹೆದರಿಕೆಯಾಯಿತು. ಅಷ್ಟುಹೊತ್ತಿನಿಂದಲೂ ಪಟ್ಟ ಪ್ರಯಾಸಕ್ಕೆ ಈ ಪ್ರತಿಫಲವೇ ? ಮೈಯೆಲ್ಲಾ ಬೆವರಿನಿಂದ ಒದ್ದೆಯಾಯಿತು. ಆದರೂ ಕಿಟಕಿಯ ಮುಂದೆ ಬಂದು ನಿಂತೆ. ಅಷ್ಟರಲ್ಲಾಗಲೇ ಹೇಗೋ ಏನೋ, House Full ಬೋರ್ಡ್ ಕಿಟಕಿಯನ್ನು ಅಲಂಕರಿಸಿತ್ತು. ಕ್ಯೂನಲ್ಲಿದ್ದವರೆಲ್ಲಾ ನಾನು ತಲೆಯಾಡಿಸಿದುದನ್ನು ಕಂಡು ಸಿಟ್ಟಿನಿಂದ ಹಲ್ಲು ಕಡಿದುದು ಮೋಡಗಳು ಗುಡುಗಿದಂತೆ ಕೇಳಿತು.

ಹೇಗೂ ಮುಂದೆ ನಿಂತಿದ್ದೇನೆ. ಮ್ಯಾಟನಿ ತಪ್ಪಿದರೇನಂತೆ, ಈವಿನಿಂಗ್ ಷೋಗೆ ಹೋದರಾಯಿತೆಂದು ಜೇಬಿನಿಂದ ಎಡ್ಗರ್ ವ್ಯಾಲೇಸನನ್ನು ಹೊರತೆಗೆದೆ.

ಎರಡನೆಯ ಗಂಟೆ ಬಾರಿಸಿತು. ಸುತ್ತಲೂ ನೋಡಿದೆ, ಇಷ್ಟುಹೊತ್ತೂ ನೆನಪಿಗೆ ಬಾರದ ಪೋಸ್ಟರಿನ ಗೋಡೆಗಳನ್ನು ಅಬ್ಬಾ ! ಏನು ಚಿತ್ರಗಳು ! ಪೋಸ್ಟರಿನಲ್ಲೇ ಅಷ್ಟು ಭಯಂಕರರಾಗಿದ್ದ ಲುಗೋಸಿ ಕಾರ್ಲಾಫರು ಚಿತ್ರದಲ್ಲಿ ಹೇಗಿರಬಹುದು ? ಎಂದು ಯೋಚಿಸುತ್ತ, ಮೊದಲನೆಯ ಪುಟವನ್ನು ತಿರುವಿ ಹಾಕಿದೆ. ಅಷ್ಟರಲ್ಲಿ ಕಡೆಯ ಗಂಟೆ ಕೇಳಿತು ... ...ಎಡ್ಗರ್ ವ್ಯಾಲೇಸ್ ಮೊದಲ ಅಧ್ಯಾಯದಲ್ಲೇ ಮೂರು ಖೂನಿಗಳನ್ನು ಮಾಡಿದ್ದ....

ಇನ್ನೂ ಎಷ್ಟು ಖೂನಿಗಳಿವೆಯೋ ಎಂದು ಯೋಚಿಸುವಷ್ಟರಲ್ಲಿ ಥಿಯೇಟರಿನಿಂದ ಚಿತ್ರ ಶುರುವಾದ ಶಬ್ದವೂ ಕೇಳಿತು. ಆಮೇಲೆ........ತೆರೆಯಮೇಲಿನ

ಝುಂಕಾರವೊಂದು ಎಲ್ಲರೆದೆಯನ್ನಲ್ಲದಿದ್ದರೂ ನನ್ನ ಎದೆಯನ್ನು ನಡುಗಿಸಿತು. ಥಿಯೇಟರಿನಿಂದ ಹೋ ಎಂಬ ಶಬ್ದ, ಸಿಳ್ಳೆ, ವಹವ್ವಾ ....ಮೂರು ನಿಮಿಷ ಕಳೆಯಿತು. ಇದ್ದಕ್ಕಿದ್ದಂತೆ ಬುಕಿಂಗ್ ವಿಂಡೋನಿಂದ House Full ಬೋರ್ಡ್ ಒಳಕ್ಕೆ ಸರಿಯಿತು.

" ಒಂದೇ ಒಂದು ಸೀಟ್ ಖಾಲಿಯಾಯ್ತಂತೆ ಸಾರ್ ! '' ಬುಕಿಂಗ್ ಕ್ಲಾರ್ಕ್ ಟಿಕೀಟನ್ನು ಹರಿಯುತ್ತ ಹೇಳಿದ. " ಖಾಲಿಯಾಯ್ತಂತೆ ! ! '' ಯೋಚಿಸುತ್ತಾ ದುಡ್ಡನ್ನಿತ್ತು ಟಿಕೆಟನ್ನು ತೆಗೆದುಕೊಂಡು ಗೇಟಿನ ಬಳಿ ಹೋದೆ. ಬುಕಿಂಗ್ ಕ್ಲಾರ್ಕ್‌ನ " ಖಾಲಿಯಾಯ್ತಂತೆ ! " ಮನವನ್ನು ಕಾಡುತ್ತಿತ್ತು. ನಾನು ಗೇಟನ್ನು ಸೇರುವುದಕ್ಕೂ ಒಳಗಿನಿಂದ ಯಾರನ್ನೋ ಸ್ಟ್ರೆಚರ್‌ನಮೇಲೆ ತರುವುದಕ್ಕೂ--ಥಿಯೇಟರಿಂದ ಹೊರಕ್ಕೆ ಅಷ್ಟೆ !--ಸರಿಯಾಯಿತು. ಆತ ಮೂರ್ಛೆ ಹೋಗಿದ್ದ....ಆತನನ್ನು ಹತ್ತಿರ ಬಂದಾಗ ನೋಡಿದೆ........ಅಯ್ಯೊ ! ರಾಮು ! !

ತಲೆ ತಿರುಗಿತು. ಬೀಳುವಂತಾದರೂ........ಎಚ್ಚತ್ತಾಗ ಲುಗೋಸಿ ಕಾರ್ಲಾಫರಿಬ್ಬರೂ ತೆರೆಯಮೇಲೆ ....ನಾನೂ ಮೂರ್ಛೆಹೋದೆ.

—ಹೊನ್ನಮ್ಮ ಎಿ. ಮೂರ್ತಿ.

ದುರ್ಭಿಕ್ಷದಲ್ಲಿ, ಅಧಿಕಾರಿ ಆಟ !

ಪಂಗ್ನಾಮ ತಪ್ಪೋಕೆ ರಂಗ್ನೇಕರಿಲ್ಲವೆ ?

ಕಿಷನ್‌ಚಂದ್‌ಗೆ ಕ್ರುಷನ್ ಸಾಲ್ಟ್ ಬೇಕಂತೆ

ಬಾಲೆಲ್ಲೋ ರಂಗಾಚಾರಿ ಅಂದ್ರೆ, ಆಕಾಶದಲ್ಲೆಲ್ಲೂ ಇಲ್ಲ, ಅಂದನಂತೆ.

ಸಹನೆ ಇದ್ದರೆ ಸಹನಿ ಚೆನ್ನ

ಕ್ಯಾಚ್ ಹಿಡಿಯೋಕೆ ಹೊಂಗೋರ ಕೈಯಲ್ಲಿ ತೂತು

ರಂಜೀ ! ನೀನು ಅಪರಂಜಿ

ಪೋಲೀಸಿನವರು

ನನ್ನ ಸೈಕಲನ್ನೂ ಮೊನ್ನೆ ಯಾರೋ ಕದ್ದರು. ಹೊಸಾಹೊಸದು ; ರ್‍ಯಾಲೆ. ತುಂಬಿದ ಊರಲ್ಲಿ , ಲಾಂದ್ರದ ಕಂಬದ ಸಮಿಸಮೀಪದಲ್ಲಿ ; ಸುಡು ಮಧ್ಯಾಹ್ನ ಹನ್ನೊಂದೂ ಮುಕ್ಕಾಲುಗಂಟೆಗೆ ! ಸಾಹೇಬರ ಬೇಟೆಗಾಗಿ ಮುಖಕ್ಷೌರಮಾಡಿಸಿಕೊಳ್ಳೋಣ ಅಂತ ಸಲೂನಿಗೆ ನುಗ್ಗಿದ್ದೆ. ಬಲಗಡೆ ಒಂದು ಪಟ್ಟೆ ಎಳೆದ, ಎಡಗಡೆ ಒಂದು ಪಟ್ಟೆ ಎಳೆದ ; ಹಾಗೂ ಹೀಗೂ ಮುಗಿಯಿತು ಎಂದು ಎರಡಾಣೆ ಕಿತ್ತ. ಹೊರಗೆ ಬಂದರೆ ಲಬೋ ಲಬೋ !

‘ ಎಲಾ, ತಸ್ಕರಾಚಾರ್ಯ ! ಬಡಸಾಯಿ ಬೈಸ್ಕಲನ್ನ ಬಾಯ್ಗೆ ಹಾಕಿಕೊಂಡೆಯಾ, ಧೂರ್ತಾ ’ ಅಂತ ಓಡಿದೆ, ಪೋಲೀಸ್ ಸ್ಟೇಷನಿಗೆ. ‘ ನಿನ್ನ ಮಂಡಿ ಮುರಿದು, ನಾಲಗೆ ಕಿತ್ತು, ಚಮ್ಡ ಸುಲಿದು, ಉಗುರುಸಂದಲ್ಲೆಲ್ಲ ಗುಂಡುಸೂಜಿ ಹೊಡೆದು....... ’ ಎಂದು ಶಪಿಸುತ್ತ ಹಾರಿದೆ.

ವರಾಂಡಾ ಮೇಜಿನ ಹತ್ತಿರ ಧಡಿಯ ಒಬ್ಬ ಕಿವಿಯ ಹಿಂಭಾಗವನ್ನು ಕೆರೆಯುತ್ತ ಆಕಳಿಸುತ್ತಿದ್ದ. “ ಏಳಿ ! ಬನ್ನಿ ! .,......ಏಳಯ್ಯ ! ಹೊಡೆದುಕೊಂಡು ಓಡುತ್ತಾ ಇದಾನೆ, ರಾಸ್ಕಲ್ !...ನನ್ನ ಸೈಕಲು ! ರ್‍ಯಾಲೆ....ಮೋಟರ್ ಸೈಕಲಿಲ್ಲವೆ ಸ್ಟೇಷನಲ್ಲಿ .. ತರಿಸಿ ! ನಾಲ್ಕೋ ಐದೋ........ಇನ್‌ಸ್ಪೆಕ್ಟರನ್ನು ಎಬ್ಬಿಸು, ಓಡಿಸು ! ” ಎಂದು ಕೂಗಿದೆ.

ಅವನು ಏಳಲಿಲ್ಲ ; ಫೋನನ್ನು ಎತ್ತಿ ಅದರೊಳಕ್ಕೆ ಅರಚಲಿಲ್ಲ. ಸೈಕಲು ಕಳುವೆಂದರೆ ಅವನಿಗೆ ಹೊಸದೆ ? ನನ್ನನ್ನ ನಾಲ್ಕು ನಿಮಿಷಗಳ ಕಾಲ ನಿಧಾನವಾಗಿ ನೋಡಿದ. ಕಿವಿಯಿಂದ ಕೈತೆಗೆದು, ಮೇಜಿನೊಳಗಿಂದ ಒಂದು ಫಾರಮ್ಮನ್ನು ಹೊರಗೆಳೆದು, ನನ್ನ ಮುಂದಿಟ್ಟ. ಸರ್ಕಾರಿ ಶಾಯಿಯಲ್ಲಿ ಒಂದು ಸರ್ಕಾರಿ ಕಡ್ಡಿಯನ್ನದ್ದಿದ.

“ ನಿಮ್ಮ ಹೆಸರು ? ”

ಹೇಳಿದೆ.

“ ಆ ? ”

ಮತ್ತೆ ಹೇಳಿದೆ.

“ ಗಟ್ಟಿಯಾಗಿ ಹೇಳಿರಿ ”

ಗಟ್ಟಿಯಾಗಿ ಹೇಳಿದೆ.

" ವಯಸ್ಸು ? '' " ತಂದೆಯ ಹೆಸರು ? " " ಕಸಬು ? " " ವಾಸಸ್ಥಳ ? '' " ಜನ್ಮಸ್ಥಳ ? ''

ನನಗೆ ರೇಗಿತು. " ಏನಯ್ಯಾ, ಇದು ? ಆಟ ಆಡುತ್ತಾ ಇದೀಯಾ ? ಆ ರಾಸ್ಕಲ್ ಇಷ್ಟುಹೊತ್ತಿಗೆ ಎಂಟುಮೈಲಿ ಆಚೆಗೆ ಸಾಗಿಸಿರುತ್ತಾನೆ, ನನ್ನ ರ‍್ಯಾಲೇನ ! ಅವನ ಹಿಂದೆ ಓಡದೆ, ನನ್ನನ್ನೇ ಸತಾಯಿಸುತ್ತೀಯಲ್ಲೋ ? '' ಎಂದೆ. ರೇಗಿ ರೇಗಿ ನನಗೆ ಅಳು ಕೂಡ ಬಂತು.

" ಹೇಳಿರಿ ! ಕೇಳಿದ್ದಕ್ಕೆ ಉತ್ತರ ಹೇಳಿರಿ ! ನಮ್ಮ ಕೆಲಸಾನ ನೀವು ನಮಗೆ ಕಲಿಸಬೇಕಾಗಿಲ್ಲರಿ " ಎಂದು, ಅವನು ನನ್ನ ರಟ್ಟೆ ಹಿಡಿದ.

ಹೇಳಿದೆ. " ನಿಮ್ಮ ತಂದೆಯ ಕಸಬು ? ಅಣ್ಣಂದಿರೆಷ್ಟು ? ಅಕ್ಕಂದಿರು ? ಭಾವಂದಿರು ? ಅವರೆಲ್ಲೆಲ್ಲಿದಾರೆ ? ನಿಮ್ಮ ಮನೆಯಲ್ಲಿ ಸೈಕಲು ಓಡಿಸಲು ಬರುವ ಹೈಕಳೆಷ್ಟು ? ಆಳುಗಳೆಷ್ಟು ? ಅವರ ವಯಸ್ಸು ? ಎಲ್ಲಿಗೆ ಹೊರಟಿದ್ದಿರಿ ? ಸಾಹೇಬರನ್ನು ಯಾಕೆ ಭೇಟಿ ಮಾಡಬೇಕಾಗಿತ್ತು ? ಅವರ ಹೆಸರು ? ವಯಸ್ಸು ? ಜಾತಿ ? ಸಲೂನು ಯಾವುದು ? ಮಾಲೀಕ ಯಾರು ? ಕ್ಷೌರಮಾಡಿಸಿದ ಮುಖ ಯಾವುದು ? ಅದರ ಉದ್ದ ? ಅಗಲ ? ''........ರಟ್ಟೆಮೇಲೆ ಅವನ ಕೈ ಇದ್ದೇ ಇತ್ತು ... ... ಹೇಳಿದೆ ; ಒಂದೂ ಬಿಡದೆ ಹೇಳಿದೆ. ಮೂರು ಪುಟ ತುಂಬಿತು

ಅವನು ಕಡೆಗೂ ಎದ್ದ. ಮೋಟಾರ್ ಸೈಕಲ್ಲುಗಳನ್ನು ಹೊರತಂದು ನನ್ನ ರ‍್ಯಾಲಿ ಹಿಂದೆ ದೌಡಾಯಿಸುವರು ಎಂದು ಹಿಗ್ಗಿದೆ. ವರಾಂಡಾದಿಂದ, ಅವನು ಸ್ಟೇಷನೊಳಕ್ಕೆ ಹೋದ. " ಬೇಗ ತನ್ನಿ ಸಾರ್ ನಿಮ್ಮ ಮೋಟಾರ್ ಸೈಕಲನ್ನ !" ಎಂದು ಅಂಗಲಾಚಿದೆ. " ಖಾಮೋಷ್ ! ಇನ್‌ಸ್ಪೆಕ್ಟರಿದಾರೆ ಒಳಗೆ ! ಅವರಿದನ್ನೆಲ್ಲ ಆಜಮಾಯಿಷಿ ಮಾಡಿ ಸರಿ ಅಂತ ರುಜು ಹಾಕಿದ ಮೇಲೆ ಮುಂದಿನ ಯೋಚನೆ ! '' ಎಂದ. ಒಳಕ್ಕೆ ಪ್ರವೇಶಿಸಿದ.

ಅಲ್ಲೇ ಇದ್ದ ಗಡಿಯಾರವನ್ನೇ ನೋಡುತ್ತ ಕುಳಿತೆ. ಟಿಕ್ ಟಾಕ್ ಟಿಕ್ ಟಾಕ್ ಟಿಕ್ ಟಾಕ್..../...ಎರಡು ನಿಮಿಷ....ಮೂರು... ಐದು... ಎಂಟಾಯಿತು ! ನಾನೇ ಆ ಮಹರಾಯನನ್ನ ಕಂಡು ನನ್ನ ಅಹವಾಲನ್ನು ಹೇಳೋದು ವಾಸಿ ಎನಿಸಿತು. ಎದ್ದೆ....


ಒಳಗೆ ಅವರು ನನ್ನ ಸ್ನೇಹಿತನನ್ನು ಯದ್ವಾತದ್ವಾ ಬೈಯುತ್ತಿದ್ದರು " ಏನು ತಿಂದೆಯೊ ? " ಎಂದು ವಿಚಾರಿಸುತ್ತಿದ್ದರು. " ತಲೆಯೊಳಗೆ ಏನನ್ನು ತುಂಬಿಕೊಂಡಿದಿಯೊ ? '' ಎಂದು ಕೇಳುತ್ತಿದ್ದರು. ಆಗ ನನಗಾದ ಸಂತೋಷ

ದಲ್ಲಿ, ಕಳ್ಳ ಹತ್ತು ಹದಿನೈದು ಮೈಲಿ ಆಚೆ ಹೋಗಿರುತ್ತಾನೆ, ಎಂಬುದನ್ನೇ ಮರೆತೆ.

ಇನ್‌ಸ್ಪೆಕ್ಟರು ಬಾಗಿಲನ್ನು ತಳ್ಳಿಕೊಂಡು, ನನ್ನ ಕಡೆಗೆ ಬಂದರು. “ರೀ!” ಎಂದು ನನ್ನನ್ನು ಸಂಬೋಧಿಸಿದರು. ಅವರ ಗಂಟಲು ಕೋಪೋದ್ರೇಕಗೊಂಡಿತ್ತು. ಪೋಲೀಸಿನವನ ದಡ್ಡತನಕ್ಕೆ ನನ್ನಮೇಲೆ ಯಾಕಪ್ಪ ಬೀಳುತ್ತಾರೆ, ಈಗ, ಅನ್ನಿಸಿತು.

“ಎಲ್ಲ ಬರೆಯಿಸಿಕೊಂಡ, ಮಂಕ!....ಮುಖ್ಯವಾದದ್ದನ್ನೇ ಬಿಟ್ಟ . ....” ಎಂದು ಶಪಿಸಿದರು. ನನ್ನ ಕಡೆ ತಿರುಗಿ, “ನಿಮ್ಮ ಸೈಕಲ್ ಕದ್ದನಲ್ಲಾ ಅವನ ಹೆಸರೇನ್ರಿ? ಅವನ ವಯಸ್ಸೆಷ್ಟ್ರೀ, ಅವನ ಕಸಬೇನ್ರಿ? ಹೇಳಿರಿ ಬೇಗ...” ಎಂದರು! ... ..

—ನಾ. ಕ.



ಮಹಾತ್ಮರ ಮೇಲ್ಪಂಕ್ತಿ.

೩೦

ಕರ್ಣಾ(ರ್ನಾ)ಟಕ ಪ್ರಾಂತರಚನೆಯನ್ನು ಕುರಿತು ಕನ್ನಡ ಜನ, ಕನ್ನಡದ ಅರಸರು, ಹಾಗೂ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ತೀವ್ರ ಚಿಂತಿಸುತ್ತಿರುವ ಈ ಪರ್ವಕಾಲದಲ್ಲಿ, ಶ್ರೀ. ಶಂ. ಬಾ. ಜೋಶಿಯವರಂಥ ದೇಶಾಭಿಮಾನಿ ಸಂಶೋಧಕರು ತಮ್ಮದೇ ಆದ ವಿಶೇಷ ರೀತಿಯ (ಇದನ್ನು ಅನೇಕ ವಿದ್ವಾಂಸರು ಒಪ್ಪದಿದ್ದರೂ) ಚಮತ್ಕಾರದಿಂದ, ಆ ಪ್ರಾಂತಕ್ಕೆ ಇರಬೇಕಾದ ಹೆಸರಿನ ಮೇಲೆ ಹೊಸ ಬೆಳಕನ್ನು ಬೀರುತ್ತಿರುವುದು ಸ್ವಾರಸ್ಯವಾದ ಸಂಗತಿ ; ಲಾಲಿಸಬೇಕಾದ ಸಂಗತಿ

ಶ್ರೀ ಜೋಶಿಯವರು ಕನ್ನಡ ಕನ್ನಾಡು ಕನ್ನಾಟಕ ಕಣ್ಣಾಟಕ ಕರ್ಣಾಟಕ ಎಂದು ಸಾಲಾಗಿ ಹೇಳುತ್ತ ಬಂದು, ನಮ್ಮನಾಡಿನ ನಾಮಕ್ಕೆ ಇದುವರೆಗೂ ಹಲವಾರು ಪಂಡಿತರು ಹೇಳುತ್ತ ಬಂದಿರುವ ಕರ್‌ನಾಡು, ಕರುನಾಡು, ಕರಂನಾಡು, ಕಡುನಾಡು, ಕಮ್ಮಿತುನಾಡು, ಕರ್ಣನ ಆಟದನಾಡು, ಕರ್ಣೇ ಅಟತೀತಿ ಕರ್ಣಾಟ, ಕರ್ಣಾಟ ಎಂಬ ರಕ್ಕಸನ ಬೀಡು, ಎಂಬ ಊಹೆಗಳನ್ನೆಲ್ಲ ತಳ್ಳಿಹಾಕಿದಾರೆ. ಕರ್ಣ ನಟ ಎಂಬುವರು ಇಬ್ಬರೇ ಒಬ್ಬರೇ ಎಂಬ ಪ್ರಶ್ನೆಯನ್ನು ಎತ್ತಿಕೊಂಡು ಬಹುವಾಗಿ ಕ್ಲೇಶಗೊಂಡಿದ್ದಾರೆ. 'ನಟೋ ಬುರುಡ ಏವಚ' ಎಂದು ಯಮನೇ ಹೇಳಿರುವುದರಿಂದ, ನಟರನ್ನು ನಾವು ಗಮನಿಸಬೇಕಾಗಿಯೇ ಇಲ್ಲವಾಗಿ ಇನ್ನು ಉಳಿದಿರುವುದು ಕರ್ಣರು. ಕರ್ಣರೆಂದರೆ ಕರಣರೇ ?, ಎಂಬ ಸಂದೇಹ (ಅಂತಃಕರಣವನ್ನು ನೋಡಿ) ತಾನಾಗಿಯೇ ಏಳುವುದು. ಕರಣರೆಂದರೆ, "ಕೈ" (!) ಯವರು ; ಗೆಮ್ಮೆಯವರು. (Colonel ?) ಎಂಬುದು ಸಮಂಜಸವೇ ಹೊರತು, ಕಿವಿಯವರೆಂದಲ್ಲ. ಏಕೆಂದರೆ, ಜೋಶಿಯವರು ಹೇಳುವ ಹಾಗೆ, "ಕಿವಿಗಳು ಯಾರಿಗೆ ಇಲ್ಲ ?"

ಕನ್ನಡ ಕನ್ನಾಟು (Connaught ?) ಕನ್ನಾಡಿಗ ಕನ್ನಡಿಗ ಹಾಗೆಯೇ ಕರ್ಣ ನಟ ಇವೆಲ್ಲ ಅಚ್ಚಕನ್ನಡ ಪದಗಳೇ ಇರಬೇಕು. ಅದು ಸ್ವತಃ ಸಿದ್ಧ. ನಟವೇ ನಾಡು ! ಅದು ಕನ್ನಡಶಬ್ದ ! (Nod ? 'ನಾಡೆಂದರೆ ತಲೆದೂಗದವನಾವನ್ ?') ಉಳಿದ ಶಬ್ದವೇ ಕನ್ (ಕನ್ನಯ್ಯ ಕನ್ನೇಶ್ವರ ಕನ್ನಂಬಾಡಿ ಇತ್ಯಾದಿ) ಅಥವಾ ಕಳ್ (ಹಾಲು ; ಗೋವಳರು ; ಪುಷ್ಟಿಯಾದ ಆಹಾರ ತಿಂಬುವವರು ; ಪರಾಕ್ರಮಿಗಳು ; "ಹಾಲಾ" ಎಂಬ ಹೆಸರನ್ನು ನೋಡಿ ; ಬಲಿಷ್ಠರು ಸ್ವಾಭಾವಿಕವಾಗಿ ಪುಂಡರು, ಆದ್ದರಿಂದ, ಕಳ್ಳರಿಗೆ ಕೆಟ್ಟ ಹೆಸರು) ಅಥವಾ ಕಣ್ (ಕಣ್ಣರಪಾಡಿ,

ಕಣ್ಣನೂರು ಕಾಸರಗೋಡಿಗೆ ಹತ್ತಿರ ! ಸಾಲದ್ದಕ್ಕೆ, ‘ ಕರ್ಣಾಡೀಣಾಂ ಕುಣಂತಾ ಕುರಲತರಲಣಂ ’--ರಾಜಶೇಖರ).

ಇಷ್ಟು ವಿಚಾರಗಳನ್ನೂ ತಲೆಗೆ ತುಂಬಿಕೊಂಡ ಮೇಲೆ, ನಾವು ಕನ್ನರೇ, ಕಣ್ಣರೇ, ಅಥವಾ, ಕಳ್ಳರೇ, ಎಂಬ ಅನುಮಾನ ಹುಟ್ಟುವುದು ಸಹಜ. ಆದರೆ ಜೋಶಿಯುವರು ಸಿದ್ಧಾಂತಮಾಡಿರುವ ಹಾಗೆ, “ ಕನ್ನರು ಕನ್ನಡದ ಜೀವಾಳ ! ” ಕಮ್ಮರು ಆಂಧ್ರರ ಪ್ರಾಣ, ಎಂಬಂತೆ.

ಕನ್ನರು ಎಂದರೆ ಏನು ಎಂಬುದನ್ನು ಸೂಕ್ಷ್ಮಬುದ್ಧಿಯಿಂದ ಸಂಶೋಧನೆ ಮಾಡಬೇಕು. ಆಗ ಕನ್ನರೆಂದರೆ, ಕಂನರರು ಎಂದು ಹೊಳೆಯುತ್ತದೆ. (ಕಿಂ + ನರ=ಕಿನ್ನರ ; ಕುಂ + ನಿ–ಕುನ್ನಿ ; ಬಿಂ + ನಾಣ=ಬಿನ್ನಾಣ !) ಆದ್ದರಿಂದ, ನಮ್ಮ ನಾಡು ಕಂನಾಡು, ನಾವು ಕಂನರರು, ನಮ್ಮ ನುಡಿ ಕಂನುಡಿ, ನಮ್ಮ ಪ್ರಾಂತ ಕಂ ಪ್ರಾಂತ ! ಪ್ರಚಂಡ ಅಖಂಡ, ‘ ಕಂ ’ !

ತಂ + ಇಳ್ ಪ್ರಾಂತದಂತೆ, ಬಾಂ + ಬೆ ಯಂತೆ, ಪಂ Job ನಂತೆ, ಬೆಂ + ಗಾಳದಂತೆ ಸಿಂ + ಧ್ ನಂತೆ ಆಂ + ಧ್ರದಂತೆ, ನಮ್ಮ ಪ್ರಾಂತಕ್ಕೂ ಏಕಾಕ್ಷರ ಸೊನ್ನೆ ಮಿಶ್ರಿತನಾಮಧೇಯ ! ಇದೀಗ ಸುಯೋಗ.

“ ಕಂ ’’ ಎಂಬ ನಮ್ಮ ನಾಡಿನ ಪ್ರಾಚೀನ ಹೆಸರನ್ನು ಜನನಾಯಕರು ಪುನರುದ್ಧರಿಸಿದರೆ, ಇತರ ಪ್ರಾಂತದವರೂ ಕೂಡ ತಂತಂಮ ನಟ (ನಾಡ) ಜನಾಂಗದ ಹೆಸರನ್ನು, ಕುಲ್ಲೂಕ ಭಟ್ಟನ ಟೀಕೆಯೊಳಗಿನ ತತ್ವವಾದ “ ಏತಾನಿ ಅಪಿ ಏಕಸ್ಯ ಏವ ನಾಮಾನಿ ’’ ಎಂಬುದನ್ನನುಸರಿಸಿ ತಂ ಸಿಂ ಪಂ ಬೆಂ ಬಾಂ ಸಂ (ಸಂಯುಕ್ತ ಪ್ರಾಂತ) ಮಂ (ಮಧ್ಯಪ್ರಾಂತ) ಎಂದು ಕಂಮಿಮಾಡಿ, ಅಚ್ಚು ಕೂಟದವರಿಗೂ ಪತ್ರಿಕಾಕರ್ತರಿಗೂ ಉಪನ್ಯಾಸ ಕೇಳುವ ಮಂದಿಗೂ, ಪ್ರಾಸ ಹುಡುಕುವ ಕವಿಗಳಿಗೂ ಮಹೋಪಕಾರ ಮಾಡುತ್ತಾರೆಂದು ನಂ ಬುತ್ತೇವೆ.

––ರೇವಂಣ.

——o——

ಅನ್ಯಾಯಪಲ್ಲಿ ಗಳಿಸೋಕೆ ಅಬ್ದುಲ್ಲಾ ಬಿಟ್ಟಾನೆಯೆ ?
ಬಾಯಲ್ಲಿ ಲಾಯಲ್‌ಟಿ, ಬಾಗಲಲ್ಲಿ ಟಿ ಎನ್ ಟಿ
ಕಾಸುಕೊಡೋ, ಅಂದರೆ ಕಾಶ್ಮೀರ ತೋರಿಸಿದ
ಹತ್ತಕ್ಕೆ ಹೆದರಿ ತೊಂಬತ್ತನ್ನೆದುರಿಸಿದ
ಕಾಶ್ಮೀರದ ಬಾವೀಲಿ, ಕಂಡೋರನ್ನ ತಳ್ಳಿ ಆಳ ನೋಡಿದ
ಹೇಡಿ ಅಂತ ಅಂದರೂ, ಓಡಿ ಬಂದವನೇ ಜಾಣ

ದವಡೆ

ನಗತಕ್ಕ ಸಮಾಚಾರವಲ್ಲ ಆದರೂ, ಹನುಮಂತನನ್ನ ನೋಡಿ ಶಾಮಣ್ಣ ನಕ್ಕೇ ಬಿಟ್ಟ. ಮೊದಲೇ ಮನ್ಮಥ! ನಾಲದ್ದಕ್ಕೆ, ದವಡೆ ಬೇರೆ ಊದಿ ಉಬ್ಬೆಗೆ ಹಾಕಿದಹಾಗಿತ್ತು. ನಕ್ಕಮೇಲೆ, ಶಾಮಣ್ಣನಿಗೆ ಜ್ಞಾನೋದಯವಾಯಿತು. ಪಾಪ, ಹಳೇ ಸ್ನೇಹಿತ, ಎಲ್ಲಿ ಏಟು ತಿಂದನೋ, ಏನುಕಥೆಯೋ, ಆಸ್ಪತ್ರೆ ಕಡೆ ಹೋಗು ತ್ತಿರುವ ಹಾಗಿದೆ, ಕುಶಲಪ್ರಶ್ನೆ ಮಾಡದೆ ಇದ್ದರೆ ಹೇಗೆ, ಎಂದು ಯೋಚಿಸಿದ. " ಯಾಕೊ, ಹೀಗಾಗಿಬಿಟ್ಟೆ ? " ಎಂದು ಉಪಚಾರಪೂರಿತವಾಗಿ ಕೇಳಿದ. " ಹಲ್ಲು ನೋವು ! " ಎಂದು ಹನುಮಂತ ಉಸುರಿದ. " ನೋಡು ! ನನಗೂ ಹಲ್ಲಿದೆ ; ನೋವು ಉತ್ಪತ್ತಿಯಾಗುತ್ತದೆ. ಆದರೆ, ನನ್ನದೇನು ಚಿಕಿತ್ಸೆ ಗೊತ್ತೆ ? ನಿನ್ನ ಹಾಗೆ ಕೆನ್ನೆ ಅದುಮಿಕೊಂಡು ನಾನು ಬೀದಿಯಲ್ಲೆಲ್ಲ ಗೋಳಾಡುವುದಿಲ್ಲ ಮನೆ ಯಲ್ಲಿ ಲವಂಗ ಇಟ್ಟಿದೇನೆ, ಡಬ್ಬದಲ್ಲಿ. ಒಂದು ಹಿಡಿ ನನ್ನ ಹೆಂಡತಿ ಕೈಯಲ್ಲಿಡು ತ್ತೇನೆ. ಅವಳದನ್ನ ಚೆನ್ನಾಗಿ ಹುರಿದು ಪುಡಿಮಾಡಿ ಒಂದು ಸೌಟಿಗೆ ಹಾಕಿ ಕುದಿಸುತ್ತಾಳೆ ಒಸಡಿನಮೇಲೆ ಸವರುತ್ತಾಳೆ, ನಿಧಾನವಾಗಿ. ಗಬಕ್ ಅಂತ ಬಾಯಿ ಮುಚ್ಚಿಕೊಂಡು ಹಾಸಿಗೆಮೇಲೆ ಮಲಗುತ್ತೇನೆ ಅವಳು ಹತ್ತಿರ ಒಂದು. ಕೂತುಕೊಳ್ಳುತ್ತಾಳೆ, ಒಂದಿಷ್ಟು ಬಿಸಿನೀರು ಸಹಿತ. ಚಿಕ್ಕದೊಂದು ಟರ್ಕಿಷ್ ಟವಲಿಟ್ಟಿದೇನೆ ಬೀರುವಿನಲ್ಲಿ. ಅದನ್ನ ಆ ನೀರೊಳಗದ್ದಿ ನನ್ನ ಹೆಂಡತಿ ಮೆಲ್ಲಗೆ ಮೃದುವಾಗಿ ಶಾಖಕೊಡುತ್ತಾಳೆ, ನೋವಿರುವ ಕಡೆ. ಐದೇ ನಿಮಿಷದಲ್ಲಿ ನಿದ್ದೆ ಬಂದುಬಿಡುತ್ತದೆ. ಏಳುವುದರೊಳಗೆ ನೋವೆಲ್ಲ ಮಂಗಮಾಯ ! " ಎಂದ ಶಾಮಣ್ಣ. ಹನುಮಂತನ ಕಣ್ಣರಳಿತು. ಆ ಅಸಹ್ಯ ವೇದನೆಯಿಂದ ಪಾರಾಗಲು ಇಷ್ಟು ಸರಳವಾದ ಇಷ್ಟು ಸುಲಭವಾದ ಸುಖಮಯವಾದ ಉಪಾಯ ಒಂದನ್ನು ತನ್ನ ಆಪ್ತಸ್ನೇಹಿತ ಹೇಳಿಕೊಟ್ಟದ್ದರಲ್ಲಿ, ಕೃತಜ್ಞತೆಯೂ ಆನಂದವೂ ಉಕ್ಕಿ ಬಂತು. ಶಾಮಣ್ಣನ ಬಲಗೈಯನ್ನು ಹಿಡಿದದುಮಿ, ಅವನು, " ತುಂಬಾ ಥ್ಯಾಂಕ್ಸ್, ಶಾಮು ! ನಾನೂ ಹಾಗೆಯೇ ಮಾಡಿಸುತ್ತೇನೆ ....ನಿನ್ನ ಮನೆಗೆ ಈಗಲೇ ಹೋಗುತ್ತೇನೆ " ಅಂದ.. ....ಅರೆಕ್ಷಣದಲ್ಲೇ ಹನುಮಂತನ ಇನ್ನೊಂದು ದವಡೆಯೂ ಊದಿತು !

— ಪಾಟೀಳಿ.

—o—

ಪಾತಾಳದಲ್ಲಿ ಪಾಪಯ್ಯ

(3. ಕುಬೇರಾ ಪ್ರಿಂಟಿಂಗ್ ಪ್ರೆಸ್)

ಸಂಜೆ ಸುಮಾರು ಏಳರ ಸಮಯ. ದೀಪಗಳಿದ್ದ ಪಕ್ಷದಲ್ಲಿ ದೀಪ ಹೊತ್ತಿಸುವ ವೇಳೆ. ನಿಶಾಚರರ ಸಂಚಾರವಿನ್ನು ಪ್ರಾರಂಭಿಸಿರಲಿಲ್ಲ. ದಾರಿ ತಪ್ಪೀತೆಂಬ ಗಾಬರಿಯಿಂದ ನಾನು ಆದಷ್ಟು ಬೇಗ ನನ್ನ ಹೋಟಲನ್ನು ಸೇರಿಕೊಳ್ಳುವ ಯತ್ನದಲ್ಲಿ ಸರಸರನೆ ನಡೆಯುತ್ತಿದ್ದೆ. ಅಲ್ಲೊಂದು ಇಲ್ಲೊಂದು ಅರ್ಧಂಬರ್ಧ ಕದ ತೆರೆದ ಎಲೆಯುಡಿಕೆಯಂಗಡಿಗಳಿಂದ ಹಣತೆಯ ಬೆಳಕುಗಳು ಮಿಣುಗುತ್ತಿದ್ದವು. ಗಂಟೆ ಎಷ್ಟೆಂದು ಸರಿಯಾಗಿ ತಿಳಿಯುವ ಉದ್ದೇಶದಿಂದ ಒಂದು ಅಂಗಡಿಯ ಹತ್ತಿರ ಹೋಗಿ ದೀಪದ ದಿಕ್ಕಿಗೆ ಕೈಗಡಿಯಾರವನ್ನು ತಿರುಗಿಸಿ ಹಿಡಿದೆ.

ಎಲೆಯುಡಿಕೆ ಅಗಿಯುತ್ತ ಅಲ್ಲೇ ನಿಂತಿದ್ದ ಒಬ್ಬ ಆಸಾಮಿ, ಬಾಯಲ್ಲಿದ್ದ ತಂಬುಲವನ್ನು ಚರಂಡಿಯೊಳಕ್ಕೆ ಉಗುಳಿ ನನ್ನ ಕಡೆ ತಿರುಗಿದ.

" ಎಷ್ಟಾಯ್ತು ಸಾರ್ ಟೈಮು ? "

" ಆರೂ ಐವತ್ತೈದು "

" ಥ್ಯಾಂಕ್ಸ್. ಒಂದುಪಕಾರ ಮಾಡ್ತೀರಾ ? "

" ಏನು ? ಹೇಳಿ. "

" ಒಂದು ನೂರು ರೂಪಾಯಿ ನೋಟಿಗೆ ಚಿಲ್ರೆ ಇರುತ್ತೆಯೇ ಅಂತ ..."

ತಡೀರಿ. ಇದ್ರೆ ನೋಡೋಣಾಂದೆ.

ಕೋಟಿನ ತೋಳಿನೊಳಕ್ಕೆ ಕೈಬಿಟ್ಟು ಕಳ್ಳ ಜೇಬಿನಿಂದ ನನ್ನ ಪರ್ಸನ್ನು ಈಚೆಗೆಳೆದೆ.

" ಕ್ಷಮಿಸಿ—ಇಪ್ಪತ್ತು ರೂಪಾಯಿ ಕಮ್ಮಿ ಇದೆ. "

" ಪರವಾಯಿಲ್ಲ ಕೊಡಿ. ತಮ್ಮ ವಿಳಾಸ ಕೊಟ್ಟರೆ, ನಾಳೆ ಬಂದು ಬಾಕಿ ತೆಗೆದುಕೋತೇನೆ. ಈಗ ಬಹಳ ಅರ್ಜೆಂಟಾಗಿ ಚಿಲ್ಲರೆ ಬೇಕಾಗಿದೆ........''

ಪಾತಾಳಕ್ಕೆ ನನಗಿಂತ ಹೊಸಬನಾಗಿ ಕಂಡ ಆ ಮನುಷ್ಯನ ಮೇಲೆ ಸ್ವಲ್ಪ ಕನಿಕರವಾಯ್ತು. ಚಿಲ್ಲರೆ ಅವನಿಗೆ ಬಹಳ ತುರ್ತಾಗಿ ಬೇಕಾಗಿರಬಹುದೆಂದು

ಎಂಬತ್ತು ರೂಪಾಯನ್ನವನ ಕೈಲಿಟ್ಟು ಅವನ ನೂರು ರೂಪಾಯಿ ನೋಟನ್ನು ಮಡಿಸಿ ಭದ್ರಪಡಿಸಿ ನನ್ನ ಅಡ್ರೆಸ್ಸನ್ನವನಿಗೆ ಹೇಳಿದೆ. ಹಾಗೇ ಅವನಿಗೆ ಒಂದು ಉಪಕಾರವನ್ನು ಮಾಡೋಣವೆಂದುಕೊಂಡು ಅವನನ್ನು ಎಚ್ಚರಿಸಿದೆ.

" ನೋಡಿ--ನೀವಿಲ್ಲಿಗೆ ಹೊಸಬರ ಹಾಗೆ ಕಾಣುತ್ತೀರಿ. ದುಡ್ಡಿನ ವಿಷಯ ದಲ್ಲಿ ಹೀಗೆ ಹಿಂದು ಮುಂದು ನೋಡದೆ ಒಬ್ಬರನ್ನು ನಂಬಿಬಿಡಬಾರದು, ಈ ಜಾಗದಲ್ಲಿ. ನಾನಾಗೋಹೊತ್ತಿಗೆ ಪರವಾಗಿಲ್ಲ . ..... '' ಅಂದೆ.

ಅವನು ನನ್ನ ಬೆನ್ನು ತಟ್ಟಿ " ನೋಡಿ .. . ನಾನೂ ಅದೇ ಹೇಳಬೇಕಂ ತಿದ್ದೆ ನಿಮಗೆ ನಾನಾಗೋ ಹೊತ್ತಿಗೆ ಪರವಾಗಿಲ್ಲ. ನನ್ನ ಗುರುತು ಸಿಗಲಿಲ್ಲವೆ? " ಅಂದ.

ಹಣತೆಯ ಬೆಳಕಿನಲ್ಲಿ ಬಗ್ಗಿ ನೋಡಿದೆ. ನಾನು ಪಾತಾಳಕ್ಕೆ ಮೊಟ್ಟ ಮೊದಲು ಪ್ರವೇಶಿಸಿದಾಗ ನನ್ನ ಮಾರ್ಗದರ್ಶಿಯಾದ ಮನುಷ್ಯ !

" ಅರೇರೇ ನೀವೇ ? ಗುರ್ತೇ ಸಿಗಲಿಲ್ಲ ! '' ಅಂದೆ.

" ಅಂತೂ ಇನ್ನುಮುಂದೆ ಎಚ್ಚರಿಕೆಯಿಂದ ಇರಿ " ಅಂದ, ಮತ್ತೆ ನನ್ನ ಬೆನ್ನು ತಟ್ಟಿ.

" ಅದು ಸರೀ....... ರೂಪಾಯಿ ನನ್ನಿಂದ ತಾನೇ ನಿಮಗೆ ಬಾಕಿ. ನನಗೇನು ಎಚ್ಚರಿಕೆ ಕೊಡುತ್ತಿದ್ದೀರಿ ? " ಅಂದೆ.

" ಹ ಹ್ಹ ಹ್ಹ ! ಈ ಬೆಳಕಿನಲ್ಲಿ ನಿಮ್ಮ ನೂರು ರೂಪಾಯಿ ನೋಟನ್ನು ಸ್ವಲ್ಪ ಪರೀಕ್ಷೆ ಮಾಡಿ ನೋಡಿ, ಗೊತ್ತಾಗುತ್ತೆ '' ಅಂದ.

ನೋಟು ಖೋಟಾ ಅನ್ನುವುದು ಸ್ಪಷ್ಟವಾಗಿ ತಿಳಿದು ಬಂತು. ನನ್ನ ಮಾರ್ಗದರ್ಶಿ ಆ ಅಂಗಡಿಯ ಮಾಲೀಕನೊಂದಿಗೆ ನೇರಿ ನಗಲಾರಂಭಿಸಿದ, ನನ್ನ ಮೂತಿಯನ್ನು ನೋಡಿ. ಕೆಲವು ಕ್ಷಣಗಳು ಕಳೆದಮೇಲೆ ಅಂಗಡಿಯವನಿಗೆ ನನ್ನ ಪರಿಚಯ ಮಾಡಿಕೊಟ್ಟ.

" ಇವರೇಕಣಯ್ಯ ಪಾಪಯ್ಯ ಅಂಬೋರು, ಈಗತಾನೇ ಹೇಳಿದೆನಲ್ಲ ... ... ಈತ ನನ್ನ ಸ್ನೇಹಿತ ಜಾನ್ ಸ್ಮಿತ್. "

" ನಮಸ್ಕಾರ. ಕ್ರಿಶ್ಚಿಯನ್ ? "

" ಕ್ರಿಶ್ಚಿಯನ್. ಈತನ ಅಡ್ಡ ಹೆಸರು ಕುಬೇರ ಅಂತ. ಎಲ್ಲಿ, ಸ್ವಲ್ಪ ಕಚ್ಚೆ ಕಟ್ಟಿ ಅಂಗಡಿಯೊಳಕ್ಕೆ ನೆಗೀರಿ. ಇವರ ಖೋಟಾ ನೋಟಿನ ತಯಾರಿಕೆಯ

ಬಿಸಿನಸ್ಸಿನ ಪರಿಚಯು ಮಾಡಿಕೊಂಡು ಹೋಗುವಿರಂತೆ ಹೊತ್ತಾದರೆ ಪರವಾಗಿಲ್ಲ. ನಾನು ದಾರಿ ತೋರಿಸ್ತೇನೆ ನಿಮಗೆ. ''

ಅಂಗಡಿಯ ಪೀಠದ ಹಿಂದೆ ತೂಗುತ್ತಿದ್ದ ಹಗ್ಗದ ಸಹಾಯದಿಂದ ನೆಗೆದು ಒಳಕ್ಕೆ ಕುಪ್ಪಳಿಸಿದೆ. ನನ್ನ ಸ್ನೇಹಿತನೂ ಹಿಂಬಾಲಿಸಿದ. ಕೂಡಲೆ ಜಾನ್‌ಸ್ಮಿತ್ ಅಂಗಡಿಯ ಬಾಗಿಲು ಮುಚ್ಚಿ ಅಗುಳಿ ಹಾಕಿ ಗೋಡೆಯಮೇಲೆ ಬೀಡಿಗಳ ಸಾಲಿನ ಒಂದು ಷೆಲ್ಫನ್ನು ಅನಾಮತ್ತಾಗಿ ತೆಗೆದು ಕೆಳಗಿಟ್ಟ— ಪತ್ತೇದಾರಿ ಕಥೆಗಳಲ್ಲಿ ನಾವೆಲ್ಲ ಓದಿರುವಂತೆ ಆ ಷೆಲ್ಫ್ ಇದ್ದ ಜಾಗದಲ್ಲಿ ಒಂದು ಬಾಗಿಲು ! ಮೂರು ಸಲ ಟಿಕ್ ಟಿಕ್ ಟಿಕ್ ಎಂದು ತಟ್ಟಿದ ಜಾನ್‌ಸ್ಮಿತ್ ಎರಡು ನಿಮಿಷ ಕಳೆದು ಇನ್ನೊಂದು ಸಲ ತಟ್ಟಿದಮೇಲೆ ಬಾಗಿಲು ತೆಗೆಯಿತು. ದೇವರ ಮೇಲೆ ಭಾರ ಹಾಕಿ ತಲೆ ಬಗ್ಗಿಸಿಕೊಂಡು ಅವರಿಬ್ಬರನ್ನು ಹಿಂಬಾಲಿಸಿ ನುಸಿದೆ ಒಳಕ್ಕೆ.

ಚಿಕ್ಕ ವಿಸ್ತೀರ್ಣದ ಮಂಕು ಬೆಳಕಿನ ಒಂದು ತಗ್ಗಾದ ಕೋಣೆ ಅದು. ಅದರ ನಟ್ಟನಡುವೆ ಒಂದು ಮಂಚದಮೇಲೆ ಮೂಗಿನವರೆಗೆ ಕಂಬಳಿ ಹೊದ್ದು ಒಬ್ಬ ನಡುವಯಸ್ಸಿನಾಕೆ ನರಳುತ್ತಾ ಮಲಗಿದ್ದಳು. ಬಾಗಿಲು ತೆಗೆದವನು ಎಳೆ ವಯಸ್ಸಿನ ಚೂಟಿಯಾದ ಒಬ್ಬ ಹುಡುಗ. ಒಳಗೆ ಬಂದಕೂಡಲೆ ಆ ಹುಡುಗನ ಬೋಳು ತಲೆಯಮೇಲೆ ಫಟ್ ಎಂದು ಆಶೀರ್ವಾದ ಮಾಡಿದ ಜಾನ್ ಸ್ಮಿತ್.

" ಅಲ್ವೊ ! ಮುಠ್ಠಾಳ ಬಡ್ಡಿಗಳ್ರಾ. ಮೂರು ಸಲ ತಟ್ಟಿದರೆ, ತಟ್ಟಿದ ಕೂಡಲೆ ಬಾಗಿಲು ತೆಗೀಬೇಕಂತ ಎಷ್ಟುಸಲ ಹೊಡುಕೊಬೇಕ್ರೊ ನಿಮ್ಮ ಮಂಡೇಗೆ ಹತ್ತೋಕೆ ? ನಾಲ್ಕು ಸಲ ತಟ್ಟಿದಾಗ ಮಾತ್ರ, ಬೈರಾಗಿ ಬಂದಿದಾನೆ, ವೇಷ ಬದಲಾಯಿಸಿ ಅಂತ ಅರ್ಥ, ಮಂದಮತಿಗಳ್ರಾ ! '' ಎಂದು ಮಂಚದ ಮೇಲಿದ್ದ ಮನುಷ್ಯನನ್ನು ಕಿವಿಹಿಡಿದೆಬ್ಬಿಸಿ ಮಂಗಳಾರತಿ ಮಾಡಿದ.

ನಾನು ಶಿಪಾರಸಿಗಾಗಿ ನಡುವೆ ಬಾಯಿ ಹಾಕಿ " ಇರಲಿ ಈಗೇನಂತೆ. ಅಷ್ಟು ಬೇಗ ಬೇಗ ಟ್ರೋರ್ಪಗೀಪನ್ ತಗುಲಿಸಿಕೊಂಡು ನಿಮ್ಮ ಶಿಷ್ಯ ತಯಾರಾದದ್ದನ್ನು ಮೆಚ್ಚಬೇಡವೆ ? '' ಅಂದೆ

" ಸ.. ... ರಿ. ಇವನಿಗಾದರೆ ಮೂರು ನಿಮಿಷ ಹಿಡೀತು. ಇವರಣ್ಣ ಒಬ್ಬ ಇದಾನೆ , ಚಿಕಾಗೋಗೆ ಹೋಗಿದ್ದಾನೆ ತಯಾರೀಗೆ ಒಂದುವರೆ ನಿಮಿಷ ದಲ್ಲಿ ಮಲಗಿಬಿಡುತ್ತಿದ್ದ, ಬಾಯಲ್ಲಿ ನೊರೆ ಬರಿಸಿಕೊಂಡು. ಅದು, ವೇಷ ಅಂದರೆ ! ಇವರಿಬ್ಬರಿಗೂ ಇನ್ನೂ ಪರಿಶ್ರಮ ಸಾಲದು '' ಅಂದ ಜಾನ್ ಸ್ಮಿತ್.

ಶಿಷ್ಯದ್ವಯದ ವದನಾರವಿಂದಗಳು ಹರಳೆಣ್ಣೆ ಕುಡಿದಂತೆ ಪ್ರಕಾಶಿಸುತ್ತಿದ್ದವು.

ಜಾನ್ ಸ್ಮಿತ್ ಮಂಚವನ್ನು ಪಕ್ಕಕ್ಕೆ ಜರುಗಿಸುವಂತೆ ಅವರಿಗೆ ಆಜ್ಞೆಮಾಡಿ ಹೇಳಿದ.

" ಯಾವೋನಾದರೂ ಬೈರಾಗಿ ಬಂದಾಗ ಹೀಗೇ ಹಿಂದು ಮುಂದು ಮಾಡಿ ನನ್ನ ತಲೇಗೆ ತಂದೀರಿ. ಇವತ್ತು ತಲಾ ನೂರು ರೂಪಾಯಿ ಫೈನು. "

ಕಿವಿಯಲ್ಲಿ ನನ್ನ ಸ್ನೇಹಿತ ಹೇಳಿದ " ಕಣ್ಣು ಕಣ್ಣು ಬಿಡಬೇಡಿ. ನೂರು ನೂರು ಖೋಟಾ ರೂಪಾಯಿ " ಅಷ್ಟೆ.

" ಬೈರಾಗಿ ಯಾರು '' ಅಂದೆ ನಾನು.

" ಕುಬೇರಾ ಕಾಲೊನಿಯಲ್ಲಿ C. I. D. ಗಳಿಗೆ ಬೈರಾಗಿ ಅಂತ ನಾಮಾಂಕಿತ" ಎಂದು ವಿವರಿಸಿದ ನನ್ನ ಸ್ನೇಹಿತ.

" ಇದೇ ಸ್ವಾಮಿ ನಮ್ಮ ಛಾಪಖಾನೆ. ಇದೋ ಇದೇ ಅಚ್ಚು ಯಂತ್ರ. ನಾನು, ಗುಲ್ಡು (ಆ ಹುಡುಗ), ವಿಶ್ವಾಮಿತ್ರ (ಸ್ತ್ರೀವೇಷಧಾರಿ), ಅವನಣ್ಣ ನಾಲ್ಕೇ ಜನ ಸೇರಿ ತಯಾರಿಸಿದ್ದು ಈ ಯಂತ್ರ " ಎಂದು ಮೊದಲು ಮಂಚವಿದ್ದ ಸ್ಥಳದಲ್ಲಿ ಟ್ಟಿದ್ದ ಚಿಕ್ಕ ಪೆಟ್ಟಿಗೆಯನ್ನು ತೋರಿಸಿದ ಜಾನ್ ಸ್ಮಿತ್. ಮಗ್ಗುಲಲ್ಲಿದ್ದ ಒಂದು ಬೇಸಿನ್ನಿನಲ್ಲಿ ಹೊಸ ನೋಟುಗಳ ಕಂತೆಗಳಿದ್ದವು.

" ಇನ್ನೂ ಇಂಕು ಆರಿಲ್ಲ '' ಅಂದ ಗುಲ್ಡು, ಒಂದು ನೋಟನ್ನ ನನ್ನ ಕೈಗೆ ಕೊಟ್ಟು.

" ನಿಮ್ಮ ಟ್ರೈನಿಂಗ್ ಎಲ್ಲಿ ಆದದ್ದು ? " ಅಂದೆ, ಜಾನ್ ಸ್ಮಿತ್‌ನ ಚಮತ್ಕಾರಕ್ಕೆ ಮರುಳಾಗಿ.

" ನಾನು ಹಿಂದೆ ಒಬ್ಬ ಪಾದ್ರಿಗೆ ಬಟ್ಲರ್ ಆಗಿದ್ದೆ. 1929ರಲ್ಲಿ ಅವರ ಹಿಂದೆ ಚಿಕಾಗೋಗೆ ಹೋಗಿ ಎರಡು ವರ್ಷ ಇದ್ದಿದ್ದರ ಉಪಕಾರ ಸ್ವಾಮಿ ಇದು. ನನಗೆ ಸಮಯ ಸಿಕ್ಕಿದಾಗಲೆಲ್ಲ ಹೋಗಿ ಖೋಟಾ ನೋಟು ತಯಾರಿಕೆಯ ವಿದ್ಯೆಯನ್ನು ಚೆನ್ನಾಗಿ ಅಭ್ಯಾಸ ಮಾಡಿದೆ ".

" ನೀವು ನೂರರ ನೋಟನ್ನೇ ಹೆಚ್ಚಾಗಿ ತಯಾರಿಸುವ ಹಾಗೆ ಕಾಣುತ್ತೆ ..." ಅಂದೆ.

" ಹೌದು. ಅದು ಯಾಕೇಂತೀರೋ, ಕೂತುಕೊಳ್ಳಿ ಹೇಳ್ತೀನಿ. ಈ ನೋಟುಗಳ್ನ ತಯಾರಿಸ್ತಿರೋ ಹಾಗೇ ಚಲಾವಣೇಲಿ ಸೇರಿಸಿಬಿಡಬೇಕು. ಕೈಲಿದ್ದಷ್ಟೂ ಆಪತ್ತು. ಹೌದೋ ಅಲ್ಲವೋ ? "

" ಅಲ್ವೇ ಮತ್ತೆ ! "

" ಈ ಕೆಲಸ ನೆರವೇರಿಸೋದಕ್ಕೆ ನನಗೆ ಬಹಳ ಜನ ಮಧ್ಯಸ್ಥರಿದ್ದಾರೆ. ಶೇಕಡಾ 50 ರ ವರೆಗೆ ಕಮಿಷನ್ ಕೊಡುತ್ತೇವೆ, ಅನ್ನಿ. ಸಾವಿರ ರೂಪಾಯಿ ನೋಟನ್ನ ಎಂಥ ಮಡ್ಡಿ ಕೈಗೆ ಕೊಟ್ಟರೂ ಚಿಲ್ಲರೆ ಕೊಡುವ ಮುಂಚೆ ಸ್ವಲ್ಪ ತಾರಾಡು ತ್ತಾನೆ. ಆದ್ದರಿಂದ ಮಧ್ಯಸ್ಥರು ಸಾವಿರದ ನೋಟುಗಳೇ ಬೇಡ ಅನ್ನುತ್ತಾರೆ. ಹತ್ತರ ನೋಟುಗಳನ್ನೇನೋ ಆಗಾಗ್ಗೆ ಅಚ್ಚು ಹಾಕುತ್ತೇವೆ, ನಮ್ಮ ನಮ್ಮ ಚಿಲ್ಲರೆ ಖರ್ಚುಗಳಿಗೆ. ಆದರೆ ಅದರಲ್ಲಿ ಉತ್ಪತ್ತಿ ಕಮ್ಮಿ. ಸಾವಿರ ನೋಟುಗಳನ್ನು ಅಚ್ಚು ಹಾಕಿದರೆ, ಕಮಿಷನ್‌ಗಿಮಿಷನ್ ಕಳೆದು ನನ್ನ ಕೈಸೇರೋದು ಇವತ್ತೆಲ್ಲ ಏನಪ್ಪ ಅಂದರೆ ಒಂದು ನಾಲ್ಕು ಸಾವಿರ ರೂಪಾಯಿ. ಒಟ್ನಲ್ಲಿ ಪಡುವ ಕಷ್ಟಕ್ಕೂ ಜವಾಬ್ದಾರಿಗೂ ತಕ್ಕ ಪ್ರತಿಫಲ ಸಿಗಬೇಕಾದರೆ ನೂರರ ನೋಟುಗಳಿಂದಲೇ "

" ಹಾಗಾದರೆ ಈ ನೂರರ ನೋಟುಗಳನ್ನು ಅಷ್ಟು ಸುಲಭವಾಗಿ ಚಲಾವಣೆಗೆ ತರಬಹುದೇ ? "

" ನೀವೇ ಈಗತಾನೇ ಬಿದ್ದಿದ್ದಿರಲ್ಲ ಹಳ್ಳಕ್ಕೆ ! ಹೊ ಹ್ಹೊ ಹ್ಹೋ ! ಎಲ್ಲ ನಾವು ಇದು ಮಾಡೋ ಇದರಲ್ಲಿದೆ. ಸಾಧಾರಣವಾಗಿ ನಾವು ಹೊಸ ಮುಖಗಳನ್ನು ನೋಡಿಯೇ ನೋಟನ್ನು ದಬ್ಬೋದು. ನಮ್ಮ ಯಜ್ಞಪಶುಗಳು ರೈಲ್ವೇ ಸ್ಟೇಷನ್‌ಗಳಲ್ಲಿ, ಬಸ್ ಸ್ಟ್ಯಾಂಡುಗಳಲ್ಲಿ, ಹೋಟಲುಗಳಲ್ಲಿ, ಜಾತ್ರೆ ಸಂತೆಗಳಲ್ಲಿ ಬೇಕಾದ ಹಾಗೆ ಸಿಗುತ್ತವೆ. ದೊಡ್ಡ ಜವುಳಿಗಿವುಳಿ ಅಂಗಡಿಗಳಲ್ಲೂ ಹಾಕುವುದುಂಟು ಟೋಪೀನ – ಏನಾದರೂ ಬಟ್ಟೆ ಬರೆ, ಒಡವೆ ವಸ್ತು, ವ್ಯಾಪಾರ ಮಾಡಿ ಚಿಲ್ಲರೆ ಪಡೆಯುತ್ತೇವೆ. ಅಂಥ ಸಂದರ್ಭದಲ್ಲಿ ಕೊಂಡ ವಸ್ತುಗಳನ್ನು ಭಾನುವಾರ ಭಾನುವಾರ ಹರಾಜು ಹಾಕಿ, ಸಂದಾಯವಾದದ್ದನ್ನ ನಾವೂ ಮಧ್ಯಸ್ಥರೂ ಹಂಚಿಕೋತೇವೆ ".

" ನಿಮ್ಮ ಮಧ್ಯಸ್ಥರು ಯಾರೂ ಇದುವರೆಗೆ ಸಿಕ್ಕಿಬಿದ್ದಿಲ್ಲವೋ ? "

" ಅದೇ ಹೇಳಿದೆನಲ್ಲ ; ಎಲ್ಲ ಅವರ ಹುಷಾರಿಮೇಲೆ ಹೋಗುತ್ತೆ—ನಮ್ಮ ಪ್ರತಿ ಒಂದು ನೋಟನ್ನೂ ಮೊದಲು ಒಂದು – – ಲೋ ಗುಲ್ಲು, ಆ 'ಲಾಂಡ್ರಿ' ತಾ ಇಲ್ಲಿ – – ಇಗೋ ಈ ಪೆಟ್ಟಿಗೇಲಿ ಹಾಕಿ ಕುಲುಕ್ತೇವೆ. ಹೊಸನೋಟಾಗಿದ್ದದ್ದು, ಇಗೋ ಒಂದು ವರ್ಷವಾದರೂ ವಯಸ್ಸಾದ ಬಣ್ಣಕ್ಕೆ ಬಂದುಬಿಡುತ್ತೆ. ಯಾವ ಸಂಶಯವೂ ಇಲ್ಲದೆ ಚಲಾಯಿಸಿ ಹೋಗುತ್ತೆ ಅಲ್ಪಜೀವಿಯಾದ ಯಾವನಾದರೂ ಏಜಂಟು ಸಿಕ್ಕಿಬಿದ್ದರೂ ನಮಗೆ ಅಂಥಾ ಹೆದರಿಕೆ ಏನಿಲ್ಲ. ನಮ್ಮ ಕುಬೇರಾ ಕಾಲೊನಿಯಲ್ಲಿ ಇಂಥ ಪ್ರಿಂಟಿಂಗ್ ಪ್ರೆಸ್‌ಗಳು ಮೂರಿವೆ. ಒಬ್ಬರಿಗೊಬ್ಬರಿಗೆ ವ್ಯಾಪಾರ ವಿಷಯದಲ್ಲಿ ಪೈಪೋಟಿ ಇದ್ದರೂ, ಬೈರಾಗಿಗಳ ವಿಚಾರದಲ್ಲಿ

ಮಾತ್ರ ನಾವೆಲ್ಲಾ ಒಂದಾಗಿಬಿಡುತ್ತೇವೆ. ಒಬ್ಬರನ್ನೊಬ್ಬರು ಬಿಟ್ಟುಕೊಡುವುದಿಲ್ಲ. ನಮ್ಮ ಮಧ್ಯಸ್ಥರು ಯಾರಾದರೂ ಸಿಕ್ಕಿಕೊಂಡಾಗ, ಹಿಡಿದ 'ಬೈರಾಗಿ'ಗೆ ಸಾಹಾ ಅಪ್ಪಟ ಹಣದಲ್ಲಿ ಒಂದು ಚೊಕ್ಕಟ ನೂರು ರೂಪಾಯಿ ಅನಧಿಕೃತ ಜುಲ್ಮಾನೆ ಕೊಡಬೇಕಂತ – – ಒಂದು ಒಪ್ಪಂದ ಇದೆ. ''

" ಓಹೋ !........ಹಾಗಂದ್ರೆ........''

" ಹೌದು ಅದೇ ! ಆ ಒಪ್ಪಂದ ಇರೊವರೆಗೆ ನಮ್ಮ ವ್ಯಾಪಾರಕ್ಕೆ ಯಾವ ತೊಂದರೇನೂ ಇಲ್ಲ ''.

" ಒಂದೊಂದು ಸಲ ಬೈರಾಗಿಗೆ ಕುಬೇರಾ ಪ್ರೆಸ್ಸಿನ ನೋಟನ್ನೇ ಕಾಣಿಕೆ ಕೊಟ್ಟು ಸಾಗುಹಾಕಿರುವ ಪ್ರಸಂಗವೂ ಉಂಟು '' ಎಂದು ಸೇರಿಸಿದ, ನನ್ನ ಸ್ನೇಹಿತ.

ಅದರ ಹಾಸ್ಯವನ್ನು ಗ್ರಹಿಸಿ ಎಲ್ಲರೂ ಸ್ವಲ್ಪಹೊತ್ತು ನಗುತ್ತಿದ್ದೆವು.

ಗಂಟೆ ಎಂಟಾಗಿತ್ತು. ಒಳ್ಳೇ " ಮೆಣಸಿನಕಾಯಿ " ಗುರ್ತಿನ ಖಾರವಾದ ಮಂಗಳೂರು ಬೀಡಿಯೊಂದನ್ನು ನಮ್ಮಿಬ್ಬರಿಗೂ ಕೊಟ್ಟು ಸತ್ಕರಿಸಿ ಜಾನ್ ಸ್ಮಿತ್ ನಮ್ಮಿಬ್ಬರನ್ನೂ ಕಳುಹಿಸಿಕೊಟ್ಟ.

—ಪುಂಗನೂರು ಪಾಪಯ್ಯ.

———



ಮೂರ್ತಿ ದೊಡ್ಡದು ! ಕೀರ್ತೀನೂ ಕಡಿಮೆ ಇಲ್ಲ !

ಆರಂಭ ಶೂರತ್ವ

ಇಂಗ್ಲೆಂಡಿನಿಂದ ಆಗತಾನೇ ಬಂದಿದ್ದ ಮಿ|| ಸ್ಕಾಟ್—ಹೆಸರಾಂತ ಕನ್ನಡ ಪಂಡಿತ—ಬೆಂಗಳೂರಿನಲ್ಲಿ ಮೂರು ದಿನ ಇದ್ದು ಹಳೆಯ ಸ್ನೇಹಿತರನ್ನು ನೋಡಿಕೊಂಡು ಮುಂದೆ ಬಿದರೆ ಗ್ರಾಮಕ್ಕೆ ಸಂಶೋಧನೆಗೆ ಹೋಗಬೇಕೆಂದು—

ಊಟೋಪಚಾರಗಳಾದ ಮೇಲೆ ಹಾಗೆ ಊರು ನೋಡಿಕೊಂಡು ಬರುತ್ತೇನೆ – ಅಡ್ಡಾಡಿದ ಹಾಗೂ ಆಗುತ್ತೆ—ಎಂದು ಒಂದು ಗಂಟೆ ಸುತ್ತಿಕೊಂಡು ಬಂದ.

ನಾನೂ ಕೋರ್ಟು ಮುಗಿಸಿಕೊಂಡು ಮನೆಗೆ ಬಂದೆ. ಹೇಗಿದೆಯ್ಯಾ ‘ಊರು’ –‘ ಸ್ವತಂತ್ರ ಆದಮೇಲೆ ನೀನು ಬಂದೇ ಇತ್ತಿಲ್ಲಾ ’ ಅಂದೆ.

‘ ನೋಡಿದೆಪ್ಪಾ ! ಮುಕ್ಕಾಲು ಪಾಲು ಮನೆಗಳ ಮೇಲೆಲ್ಲಾ ಬಿಳಿ ಧ್ವಜ ಹಾರಿಸಿದ್ದರು. ಕೆಲವು ಸನ್ಯಾಸಿಗಳ ಧ್ವಜದಂತೆ ಚಿಂದಿ ಚೂರು, ಇನ್ನು ಕೆಲವು ಮಷಾಲಿಚಿಯಂತೆ ಕೊಂಬಿಗೆ ಸುತ್ತುಕೊಂಡಿದ್ದುವು. ಇನ್ನೂ ಕೆಲವು ಬಾಗಿ ಬಗ್ಗಿ ಬಿದ್ದುಹೋಗುತ್ತಿತ್ತು. ಆದರೂ ಎಲ್ಲವೂ ಬಿಳಿ ಧ್ವಜ – ಅಥವಾ ಮಾಸಿದ ಬಿಳಿ ಧ್ವಜ. ಯಾರಿಗೆ ಶರಣು ಹೊಡೆದುದಕ್ಕೆ ಈ ಸಂಕೇತ?’ ಎಂದು ನನ್ನನ್ನೇ ಕೇಳಿದ—

ನಾನೂ ಹೋಗಿ ನೋಡಿ ಬಂದೆ- ದಿಟ. ಆಗಸ್ಟ್ ೧೫ ರಂದು ಹುಮ್ಮಸ್ಸಿನಲ್ಲಿ ಹಾರಿಸಿದ ಧ್ವಜ—ಗಾಳಿ ಬಿಸಿಲು ತಡೆಯದೆ ಮುಕ್ಕಾಗಿ ಕಂದಿ – ಮಾಸಿದ ಬಿಳಿ ಧ್ವಜವೇ ಆಗಿತ್ತು—ಅವನಿಗೆ ಹೇಳಿದೆ ಇದೆಲ್ಲಾ ನಮ್ಮ ಆರಂಭ ಶೂರತ್ವಕ್ಕೆ ಶರಣು ಹೊಡೆದುದರ ಫಲ ಎಂದು.

—o—

ಮೌಂಟ್ ಬ್ಯಾಟನ್ ಪತ್ರಿಕೆ

—o—

[ನಮ್ಮ ಜಿ. ಜಿ. ಅವರು ಲಂಡನ್‌ನ ಇಂಡಿಯಾ-ಆಫೀಸಿನಲ್ಲಿ ನೆಹರು ಜಯಂತಿ ದಿನ, "ಇಂಡಿಯಾದಲ್ಲಿ ಶೇಕಡ 97 ಜನ ಸುಖಶಾಂತಿಗಳಿಂದ ಶಿಸ್ತು ನೀತಿಗಳನ್ನು ಪಾಲಿಸುತ್ತಿದಾರೆ. ಇದನ್ನು ಒತ್ತಿ ಹೇಳದೆ, ಕೇವಲ ಕೆಲವರು ಮಾಡುವ ಅನೀತಿಯನ್ನು ಪತ್ರಿಕೆಗಳು ಒತ್ತಿ ಹೇಳುತ್ತಿರುವುದು ತಪ್ಪು" ಎಂದು ನುಡಿದರು.]

ಮೈಸೂರು ವಾರ್ತೆ

ಮಂತ್ರಿಮಂಡಲದ ಶೇಕಡ ೯೦ ಮಂದಿ ಸದಸ್ಯರಮೇಲೆ ಸಂಸ್ಥಾನದ ಪ್ರಜಾಸ್ತೋಮ ಭಕ್ತಿವಿಶ್ವಾಸ ತೋರಿಸುತ್ತಿದಾರೆ.

ಕಂಟ್ರೋಲ್ ಸಾಮಾನುಗಳನ್ನು ಬಿಟ್ಟು ಮಿಕ್ಕ ಎಲ್ಲ ಪದಾರ್ಥಗಳಿಗೂ ಈಗ ಬ್ಲಾಕ್ ಮಾರ್ಕೆಟ್ ವ್ಯಾಪಾರ ನಿಂತಿದೆ.

ಆಡಳಿತ ಸೂತ್ರ ವ್ಯವಸ್ಥೆಯಲ್ಲಿ ಲಂಚ ಪದ್ಧತಿ ಕಡಮೆಯಾಗುತ್ತಿದೆ. ಮೊನ್ನೆ ಒಬ್ಬರ ಗುಮಾಸ್ತೆ, ಗೌಡನೊಬ್ಬನು ನೀಡಿದ ಹಣವನ್ನು ನೋಡಿ ಬೇಡವೆಂದನಂತೆ.

ಬೆಂಗಳೂರಿನ ಪುರಜನರ ಪೈಕಿ ಅನೇಕರ ಹತ್ತಿರ ಗುಪ್ತ ಗನ್ನುಗಳು ಇಲ್ಲವೇ ಇಲ್ಲವಂತೆ. ರಾಜಧಾನಿಯ ೧೬ ಸಿನಿಮ ಮಂದಿರಗಳ ಪೈಕಿ ೧೫ರಲ್ಲಿ ನಿನ್ನೆ ಚಿತ್ರಪ್ರದರ್ಶನ ಸುಸೂತ್ರವಾಗಿ ಗಲಭೆ ಇಲ್ಲದೆ ನೆರವೇರಿತು.

ಇಂಡಿಯಾ ವಾರ್ತೆ

ನಿಜಾಮರ ನಿಯೋಗಗೋಷ್ಠಿ ಹೈದರಾಬಾದ್‌ನಲ್ಲೇ ಸುರಕ್ಷಿತವಾಗಿದಾರಂತೆ.

೫೬೨ ದೇಶೀಯ ಸಂಸ್ಥಾನಗಳ ಪೈಕಿ ೫೬೮ ರಲ್ಲಿ ಆಧುನಿಕ ನಾಗರಿಕ ರಾಜ್ಯಾಂಗ ಪದ್ಧತಿ ಇಷ್ಟರಲ್ಲೇ ಏರ್ಪಾಟಾಗುವ ಭರವಸೆ ಇದೆ.

ಕಳೆದವಾರವೂ ಕೂಡ, ಯಾವ ಪ್ರೈಮರಿ ಶಾಲಾ ಉಪಾಧ್ಯಾಯರ ಮನೆಯಲ್ಲೂ ಕನ್ನ ಕಳವುಗಳು ನಡೆದಿಲ್ಲ.


ಪಾಕಿಸ್ತಾನದಿಂದ ಬರುವ ಹಿಂದೂಗಳೂ ಸಿಖರೂ ತಮ್ಮ ಒಡವೆ ವಸ್ತ್ರಗಳನ್ನು ಅಲ್ಲಿರುವ ತಮ್ಮ ಸ್ನೇಹಿತರ ಉಪಯೋಗಕ್ಕಾಗಿ ಅಲ್ಲೇ ಬಿಟ್ಟು ಅತಿಚಿತ್ತಲೆಯಲ್ಲೇ ಇಂಡಿಯಾಗೆ ಬರುತ್ತಿದಾರೆ

ಲಕ್ನೋದಲ್ಲಿಳಿಯುತ್ತಿರುವ ಪಾಕಿಸ್ತಾನದ ವಿಮಾನಗಳ ಪೈಲಟ್ ಹತ್ತಿರ ಇದುವರೆಗೂ ಪಿತೂರಿ ಕಾಗದಗಳು ಸಿಕ್ಕಿಲ್ಲವಂತೆ.

ಕಾಶ್ಮೀರದಲ್ಲಿ ಈ ವರ್ಷ ದೀಪಾವಳಿ ಹಬ್ಬವನ್ನು ಊರವರಪರನಾಗಿ ನೆರೆನಾಡಿನವರೇ ಬಹಳ ವಿಜೃಂಭಣೆಯಿಂದ ಆಚರಿಸಿದರು.

ಇಂಡಿಯಾದ ಜನಸಂಖ್ಯೆಯ ಪೈಕಿ ಕೇವಲ ಶೇ. ೧೦ ರಷ್ಟು ಜನರ ಹತ್ತಿರ ಮಾತ್ರ ಗುಪ್ತಶಸ್ತ್ರಾಸ್ತ್ರಗಳಿವೆಯಂತೆ.

—○—



ಅಜ್ಜಿ—ಕತೆ ಹೇಳುತ್ತಾ.

ರಾವಣ ರಾವಣಾಂತ ಒಬ್ಬ ರಾಕ್ಷಸ ಇದ್ದ. ಅವನಿಗೆ ಹತ್ತು ತಲೆ - ತಲೆಗೊಂದು ರೇಷನ್ ಕಾರ್ಡಿನಂತೆ ಕೊಟ್ಟರೂ—ಅವನಿಗೆ ಹೊಟ್ಟೆ ತುಂಬುತ್ತಲೇ ಇರಲಿಲ್ಲ.

ಇತ್ಯಾದಿ............

ಇದು ಕೇಳಿದಿರಾ !

ಚಾಮರಾಜಾ ಪಾರ್ಕಿನಲ್ಲಿ ಅದೊಂದು ಸೊಗಸು ಮರದ ಆಚೆ ಕಡೆ ಬೆಂಚಿನ ಮೇಲೆ ಕುಳಿತರೆ ಈಚೆಕಡೆ ಬೆಂಚಿನ ಮೇಲೆ ಇರುವವರು ಕಾಣಿಸುವುದಿಲ್ಲ. ಆದರೆ ಆಡಿದ ಮಾತು ಕೇಳಿಸುತ್ತೆ. ಮೊನ್ನೆ ನಾನೊಬ್ಬನೇ ಆಚೆ ಕಡೆ ಕುಳಿತಿದ್ದೆ ಈಚೆ ಕಡೆಯಿಂದ ಎಳೆಯ ದನಿಗಳು ಕೇಳಿಸಿತು

ಮೈಸೂರು ಮಾದರೀ ಸಂಸ್ಥಾನ ಕಣೋ––

ಆದರೆ ಭಾರತದ ಮಂತ್ರಿಗಳು ನಮಗೆ ಮಾದರಿ ಅಪ್ಪಾ !

ಹಾಗಂದರೆ ?


ನೋಡಪ್ಪಾ ಅವರ ಹಾಗೇ ನಮ್ಮಲ್ಲೂ

ಪಂಡಿತ ಚಂಗಲರಾಯ ರೆಡ್ಡಿ	ಸರದಾರ್ ದಾಸಪ್ಪ
ಬಾಬು ಭಾಷ್ಯಂ	ಆಚಾರ್ಯ ಸಿದ್ದಯ್ಯ
ಜಗಜೀವನ ರಾಮಯ್ಯ	ಬಲದೇವ ಮರಿಯಪ್ಪ

ಹೌದು ! ಕಣೋ ! ಆದರೆ ಕಾಂಗ್ರೇಸ್ ಅಧ್ಯಕ್ಷ ?

– ಆದಕ್ಕೇನೋ – ನೇತಾಜಿ ಸಿದ್ದಲಿಂಗಯ್ಯ,

ಕೇಳುಕ್ಕೆ ಒಂದು ರೀತಿಯಾಗಿತ್ತು – ಅದಕ್ಕೇ – ಇಲ್ಲಿ ......



ಮಂತ್ರಿಗಳಿಗೆ ಹೀಗೆ ಕತ್ತು ಇದ್ದಿದ್ದರೆ ಹೂವಿನ ಹಾರಕ್ಕೆ ಸ್ಥಳ ಸಾಕಾಗ್ತಿತ್ತು––ಅಲ್ಲವೇ ?

ಶಿಖರ

—— o ——

ನಮ್ಮೂರು ದೇವಸ್ಥಾನದ ಗೋಪುರಕ್ಕೆ ರಾಯಗೋಪುರ ಎನ್ನುತ್ತಾರೆ. ಮಹಾಪ್ರಭು ಅರಿರಾಯಮರ್ದನ ಕೃಷ್ಣದೇವರಾಯ ಭೂಪಾಲ ಕಟ್ಟಿಸಿದ್ದು, ಅಂತ ಅರ್ಚಕರು ಹೇಳುತ್ತಾರೆ. ಅವರಿಗೆ ಅದೇ ಕೆಲಸ. ಊರಿಗೆ ಹೊಸದಾಗಿ ಯಾರು ಬಂದರೂ, ಅವರನ್ನು ಸಮೀಪಿಸಿ, ಗುಡಿಗೆ ಸಾಗಿಸಿ, ಸ್ಥಳಪುರಾಣ ಹೇಳುವುದು ; ಅವರಲ್ಲಿ ಕನ್ನಡದ ಮತವೈಭವ ಗತವೈಭವಗಳ ಮೇಲೆ ಅಭಿಮಾನವನ್ನುಂಟು ಮಾಡುವುದು ; ಅವರ ಕಣ್ಣು ಪೊರೆಯನ್ನು ತೆಗೆದು, ಕಡುಗಲಿ ಮಾಡಿ ಕಳುಹಿಸುವುದು. ಬಹು ವಾಚಾಲರು. ನಮೂರು ಅರ್ಚಕರು. ಹೆಜ್ಜೆಗೊಂದು ಹೊನ್ನಮ್ಮ ನಿಮಿಷಕ್ಕೊಂದು ನಾಗಚಂದ್ರ - ಹೇಳುವರು. 'ಪಂಪ'ನ ಸರೋವರದಿಂದ ಹಿಡಿದು, ಮಂಕುತಿಮ್ಮನ ಕಗ್ಗದವರೆಗೂ ಅವರು ಆಗಂತುಕರ ಕಿವಿಗೆ ತುರುಕಬಲ್ಲರು. ಇದರಿಂದಾಗಿ, ನಮ್ಮೂರಿನ ಹೆಸರನ್ನು ಎಲ್ಲರೂ ಬಲ್ಲರು, ತಿಪ್ಪಂಭಟ್ಟರ ಊರೆಂದರೆ, ಪ್ರಸಿದ್ಧ.

ಗೋಪುರದ ಶಿಖರವನ್ನು ಒಂದೇ ಒಂದು ಭಾರಿ ಕಲ್ಲು ಬಂಡೆಯಿಂದ ಕಡೆದಿರುವುದೇ ಸೋಜಿಗ ! ಅದನ್ನು ಪ್ರತಿಯೊಬ್ಬರಿಗೂ ತೋರಿಸಿ, ಅವರೆಲ್ಲರಿಂದಲೂ, " ಅಬ್ಬಬ್ಬ ! " ಎನ್ನಿಸುತ್ತಿದ್ದರು. ಅನೇಕರು, " ಅಬ್ಬಬ್ಬಬ್ಬಬ್ಬಾ " ಎಂದು ಕೂಡ ಹೇಳಿದ ನಿದರ್ಶನಗಳಿವೆ.

" ಲೋ ! ನನಗೆ ವಯಸ್ಸಾಗುತ್ತ ಬಂತು. ನೀನೂ ಕಲಿತುಕೊಳ್ಳೊ, ಈ ವಿದ್ಯೇನ ! ಶಾಖಾಯ ವೃಕ್ಷಾಯ, ಆಗಾಗ ಪುಡಿಕಾಸು ಬರುತ್ತಿರುತ್ತದೆ " ಎಂದು ಭಟ್ಟರು ನನ್ನನ್ನೂ ತಮ್ಮ ಸಂಗಡ ಈಚೆಗೆ ಎಳೆಯುತ್ತಿದಾರೆ.

ಮೊನ್ನೆ ಟಿ. ಬಿ. ಗೆ ಹೋದಾಗ, ನಮಗೊಂದು ಪಶು ಸಿಕ್ಕಿತು, " ಬನ್ನಿ ! ದೇವಸ್ಥಾನಕ್ಕೆ ! ಶುದ್ಧ ಸ್ವಯಂಭು ! ಪ್ರಖ್ಯಾತಗೋಪುರ ! ಜಕ್ಕಣನ ಶಿಲ್ಪ ಕಲೆಯಚ್ಚರಿಯ ಕರುನಾಡು ಅಂತಾರಲ್ಲಾ ...ಜಕ್ಕಣ್ಣ, ಪಾಪ, ಬಳಪದ ಕಲ್ಲನ್ನು ಕಡೆದ....ನಮ್ಮೂರು ಶಿಲ್ಪಿಗಳು ಕಗ್ಗಲ್ಲನ್ನೇ........" ಎಂದು ಮುಂತಾಗಿ ಪ್ರಾರಂಭಿಸಿದೆವು.

ಬಂದರು, ನಮ್ಮ ಹಿಂದೆ ...ಗೋಪುರದ ಶಿಖರ ತೋರಿಸಿದೆವು. 'ಅಬ್ಬಬ್ಬ' ಎಂಬ ಶಬ್ದ ಆತನಿಂದಲೂ ಹೊರಟಿತು. "ಸರೀರಿ ! ಅಷ್ಟು ಭಾರಿ ಬಂಡೆಯನ್ನ ಆ ಎತ್ತರಕ್ಕೆ ಹೇಗೆ ಸಾಗಿಸಿದರು ?" ಎಂದು ಕೇಳಿದರು. ಅದಕ್ಕೆ ನಾನೆಂದೆ, "ಯಾಕೆ, ಸ್ವಾಮಿ ! ಇಲ್ಲಿಂದ ಅಲ್ಲಿಯ ತನಕ ಓರೆಯಾಗಿ ಮರಳು ಪೇರಿಸಿ, ಅದರ ಮೇಲೆ ಹಲಗೆಗಳನ್ನು ಜೋಡಿಸಿ, ಆ ಬಂಡೆಗೆ ಸರಪಣಿ ಕಟ್ಟಿ, ಸಾವಿರ ಜನ ಒಟ್ಟಿಗೆ ಎಳೆದರಾಯಿತು !"

ಪಶು ತಲೆ ಅಲ್ಲಾಡಿಸಿತು ! "ಎಲ್ಲಾದರೂ ಉಂಟೇನ್ರಿ ! ಶುದ್ಧ ಭ್ರಾಂತು ನಿಮಗೆ ! ಸಾವಿರ ಜನ....ಕನ್ನಡಿಗರು....ಒಟ್ಟಿಗೆ ?........ಎಂದಾದರೂ ? ಏನಾದರೂ ?" ಎನ್ನುತ್ತ ಹೊರಟರು !

ಪ್ರಶ್ನೆಗೆ ಉತ್ತರ

ನಿಮ್ಮ ನಾಡಾವುದು ?
ನಿಮಗೇಕೆ ?
ನಿಮ್ಮೂರದಾವುದು ?
ಹೊರ ಹೋರಡೆ.
ಕನ್ನಡದ ಕಣ್ಣಿದು !
ಇರಬಹುದು.
ಚಿನ್ನದ ನಾಡಿದು !
ಅದ ಬಲ್ಲೆ.

ವೀಣೆಯ ಬೆಡಗಿದು !
ಅದನೊಲ್ಲೆ.
ಬೆಳೆಯುವ ನಾಡಿದು !
ನಿಮಗಲ್ಲ.
ಇಳೆಯ ಮಾದರಿ ಇದು !
ಯಾವರೆಗೆ ?
ಕನ್ನಡಿಗನುಸಿರಿದು !
ನಾನು ಬಿಡೆ.

"ಕರೀಪೇಟೆಯ ಲಾಭಕೋರರನ್ನೆಲ್ಲ ಕಾರಾಗೃಹಗಳಿಗೆ ದಬ್ಬಬೇಕು" (ಪತ್ರಿಕೆ).... ಕಾರಾಗೃಹಗಳಲ್ಲಿರುವ ಸ್ಥಳಾವಕಾಶವನ್ನು ನೋಡಿದರೆ, ನ್ಯಾಯನಾದ ಬೆಲೆಗೆ ಮಾರುವವರನ್ನೆಲ್ಲ ಅಲ್ಲಿಗೆ ದಬ್ಬುವುದೇ ಸೂಕ್ತವೆಂದು ತೋರುತ್ತದೆ.

* * *

ಮಂತ್ರಿಗಳ ಭಾಷಣ "ನೀವು ವ್ಯವಸಾಯದಲ್ಲಿ ಹೆಚ್ಚು ದಕ್ಷತೆ ತೋರಿಸಬೇಕು ! ನೀವೇ ನಮ್ಮ ಅನ್ನದಾತರು ! ಪ್ರತಿ ಎಕರೆಯನ್ನೂ, ಅದು ಎಷ್ಟೇ ಚಿಕ್ಕದಾಗಿರಲಿ, ಎಷ್ಟೇ ದೊಡ್ಡದಾಗಿರಲಿ, ಪ್ರತಿ ಎಕರೆಯನ್ನೂ ಉತ್ತು ಬಿತ್ತನೆ ಮಾಡಬೇಕು."

* * *